ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 40 | ಅಕ್ಟೋಬರ್ 4, 1981 | ಬೆಲೆ : 60 ಪೈಸೆ

ಕುದಿಯುತ್ತಿರುವ ಪಂಜಾಬ್

ಪ್ರತ್ಯೇಕ ಖಾಲಿಸ್ತಾನದ ಬೇಡಿಕೆಯನ್ನು ಮುಂದಿಟ್ಟು ಸಿಖ್ಖ ಜನಾಂಗದ ಒಂದು ವಿಭಾಗವು ನಡೆಸುತ್ತಾ ಬಂದಿರುವ ಚಳುವಳಿಗೆ ಹೊಸ ಆಯಾಮ ಬಂದಿದೆ. ಅಕಾಲಿದಳದ ಒಂದು ವಿಭಾಗದ ಬೆಂಬಲ ಪಡೆದು ಸಿಖ್ ವಿದ್ಯಾರ್ಥಿ ಫೆಡರೇಷನ್ ಮತ್ತು ದಲ್ ಖಲ್ಸ ಎಂಬ ಸಂಘಟನೆಗಳು ಪ್ರತ್ಯೇಕತಾ ಚಳುವಳಿಯ ಘೋಷಣೆಯನ್ನು ಜಾರಿಗೊಳಿಸಲು ಒತ್ತಾಯಿಸಿ ತೀವ್ರಗಾಮಿ ಚಳುವಳಿ ನಡೆಸಲು ಮುಂದಾಗಿದ್ದಾರೆ. ದಲ್ ಖಲ್ಸ ಸಂಘಟನೆಗೆ ಸೇರಿದ ಐವರು ಇಂಡಿಯನ್ ಏರ್‌ಲೈನ್ಸ್‌ನ ಬೋಯಿಂಗ್ ವಿಮಾನವನ್ನು ಬಲಾತ್ಕಾರವಾಗಿ ಲಾಹೋರಿಗೆ ತೆಗೆದುಕೊಂಡು ಹೋಗಿದ್ದು, ಪಾಕಿಸ್ತಾನದ ಕಮಾಂಡೋಗಳ ಚಮತ್ಕಾರ ಮತ್ತು ಸಾಮರ್ಥ್ಯಗಳಿಂದ ವಿಮಾನವೂ, ಪ್ರಯಾಣಿಕರೂ ಸುರಕ್ಷಿತವಾಗಿ ವಾಪಾಸಾಗುವುದು ಸಾಧ್ಯವಾಗಿದೆ.

ವಿಮಾನ ಮತ್ತು ಪ್ರಯಾಣಿಕರು ವಾಪಸಾಗಿರುವುದಕ್ಕೆ ಸಂತಸಪಡಬೇಕು. ಪಾಕಿಸ್ತಾನದ ಕಮಾಂಡೋ ಮತ್ತು ಇನ್ನಿತರ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಬೇಕು. ಆದರೆ ಖಾಲಿಸ್ತಾನದ ಬೇಡಿಕೆಗಾಗಿ ಹೋರಾಡುವವರು ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಬೇರೆ ಬೇರೆ ರೂಪದ ಕಾರ್ಯಾಚರಣೆ ನಡೆಸಲು ಮುಂದಾಗಿರುವುದನ್ನು ಸುಲಭದಿಂದ ನಿಲ್ಲಿಸಲು ಸಾಧ್ಯವಿಲ್ಲ. ಪಂಜಾಬಿನಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು

ಸಂಪಾದಕೀಯ

ಒಂದಾಗಿ ಜನಬೆಂಬಲ ಮತ್ತು ವಿಶ್ವಾಸವನ್ನು ಹೆಚ್ಚುಹೆಚ್ಚುಗಳಿಸುತ್ತಾ ಬಂದಿರುವುದನ್ನು ಕಂಡು ಜನತೆಯ ಒಗ್ಗಟ್ಟನ್ನು ಮುರಿಯಲು ಛಿದ್ರಕಾರಿ ಶಕ್ತಿಗಳು ಮತ್ತು ಅವಕ್ಕೆ ಬೆಂಬಲವಿತ್ತು ಅಧಿಕಾರಾರೂಢ ಕಾಂಗ್ರೆಯು ನಡೆಸಿದ ಕುತಂತ್ರದ ಪರಿಣಾಮವಾಗಿ ಇಂದು ಪಂಜಾಬ್ ಕುದಿಯುತ್ತಿದೆ. ಹಿಂಸಾಚಾರ ಮತ್ತು ಗಲಭೆ ಯಾವ ಸಮಯದಲ್ಲಿ, ಎಲ್ಲಿ ತಲೆಎತ್ತಬಹುದು ಎನ್ನುವುದು ಹೇಳಲೂ ಸಾಧ್ಯವಿಲ್ಲ.

ಸಿಖ್ಖ ತೀವ್ರಗಾಮಿಗಳು ಒಂದೆಡೆ ಖಾಲಿಸ್ತಾನ ಬೇಕೆಂಬ (ತಮ್ಮದೇ ಒಂದು ಪ್ರತ್ಯೇಕ ರಾಷ್ಟ್ರ; ತಮಗೆ ಜಾಗತಿಕ ಸಂಸ್ಥೆಯಲ್ಲೂ ಸ್ಥಾನಬೇಕು) ಬೇಡಿಕೆಯನ್ನು ಮುಂದಿಟ್ಟು ಬೆಳೆಯುತ್ತಿರುವ ಎಡ ಪ್ರಜಾಪ್ರಭುತ್ವ ಒಗ್ಗಟ್ಟನ್ನು ಹತ್ತಿಕ್ಕಲು ಪ್ರಯತ್ನಿಸುವುದು ಪ್ರಾರಂಭವಾಯಿತು. ಇದರ ವಿರುದ್ಧ ಮತ್ತು ಜನತೆಯ ಒಗ್ಗಟ್ಟನ್ನು ಮುರಿಯಲು ಹಿಂದೂ ಕೋಮು ವಾದಿಗಳು "ಹಿಂದಿ" ಸಂಕುಚಿತ ಭಾವನೆಯನ್ನು ಎತ್ತಿದರು. ಹಿಂದು ಸಮಾಚಾರ್ ಮತ್ತಿತರ ಕೆಲವು ಪತ್ರಿಕೆಗಳು ಹಿಂದಿ ಪ್ರಾಧಾನ್ಯತೆಗೆ ಸಾಕಷ್ಟು

[ಕಡೇ ಪುಟ ನೋಡಿ]

'ಚೈನಾದ ಜನತಾ ಗಣರಾಜ್ಯದ ಸ್ಥಾಪನೆಯ 32ನೇ ವಾರ್ಷಿಕೋತ್ಸವ'

ಚೈನಾಕ್ಕೆ ಶುಭಾಶಯಗಳು

1981, ಅಕ್ಟೋಬರ್ 1ರಂದು ಚೀನೀ ಜನತಾ ಗಣರಾಜ್ಯ ಸ್ಥಾಪನೆಯ ಮೂವತ್ತೆರಡನೆಯ ವಾರ್ಷಿಕೋತ್ಸವವನ್ನು ಚೈನಾದ ಜನತೆ ಮತ್ತು ಚೈನಾದ ಕಮ್ಯುನಿಸ್ಟ್ ಪಕ್ಷ ಆಚರಿಸಲಿವೆ. ಈ ಸಂತಸದ ಸಂದರ್ಭದಲ್ಲಿ ಚೀನಾದ ಜನತೆಗೂ, ಚೈನಾ ದೇಶದ ಸಮಾಜವಾದಿ ಸರಕಾರಕ್ಕೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಕ್ರಾಂತಿಕಾರಿ ಶುಭಾಶಯಗಳನ್ನು ಕಳುಹಿಸಿಕೊಟ್ಟಿದೆ. ವಿಮೋಚನೆಯ ಸಮಯದಲ್ಲಿ ತಾನು ಬಹಳ ಹಿಂದು ಳಿದಿದ್ದರೂ, ಸಾಮ್ರಾಜ್ಯಶಾಹಿಗಳು ವಿರೋಧ ಮಾಡುತ್ತಾ ಬಂದಿದ್ದರೂ, ಸೋವಿಯೆಟ್ ರಶಿಯಾದೊಂದಿಗೆ ವಿರಸ ಬಂದಿದ್ದರೂ, ಚೈನಾವು ಸಾಧಿಸಿರುವ ಅದ್ಭುತ ಪ್ರಗತಿಯ ಬಗ್ಗೆ ಸಿ. ಪಿ. ಐ. (ಎಂ) ಅವರನ್ನು ಅಭಿನಂದಿಸಿದೆ.

ಚೈನಾದ ಯಶಸ್ವೀ ಕ್ರಾಂತಿಯು ಸಾಮ್ರಾಜ್ಯಶಾಹಿಗಳ ಸ್ಥಾನವನ್ನು ಅದರಲ್ಲೂ ಮುಖ್ಯವಾಗಿ ಅಮೇರಿಕಾ ಸಾಮ್ರಾಜ್ಯಶಾಹಿಯ ಸ್ಥಾನವನ್ನು ಕ್ಷೀಣಿಸುವಂತೆ ಮಾಡುವುದಕ್ಕೆ ತನ್ನ ಕೊಡುಗೆಯನ್ನು ಇತ್ತಿತ್ತು. ಇಂಡೋ ಚೈನಾದಲ್ಲಿ ವಿಮೋಚನಾ ಹೋರಾಟಗಳು ಯಶಸ್ವಿಯಾಗಲೂ ಸಹಾಯವಾಯಿತು... ದಕ್ಷಿಣ ಆಫ್ರಿಕಾ ಮತ್ತು ಲೇಟಿನ್ ಅಮೇರಿಕಾಗಳಲ್ಲಿ ವಿಮೋಚನಾ ಹೋರಾಟಗಳಿಗೂ ಪ್ರೋತ್ಸಾಹ ಸಿಕ್ಕಿತು. ಸಮಾಜವಾದಿ ಶಕ್ತಿಗಳ ಒಗ್ಗಟ್ಟು, ರಾಷ್ಟ್ರೀಯ ವಿಮೋಚನಾ ಹೋರಾಟಗಳ ಮುನ್ನಡೆ ಮತ್ತು ಶಾಂತಿಗಾಗಿ ಹೋರಾಟ-ಇವೆಲ್ಲಾ ಸಾಮ್ರಾಜ್ಯಶಾಹಿ ಶಕ್ತಿಗಳು ಮೂರನೆ ಮಹಾಯುದ್ಧ ಮಾಡುವುದನ್ನು ತಡೆಹಿಡಿಯಿತು.

ಬಂಡವಾಳಶಾಹಿ ಜಗತ್ತಿನಲ್ಲಿ ತೀವ್ರವಾಗುತ್ತಿರುವ ಆರ್ಥಿಕ ಬಿಕ್ಕಟ್ಟು ಸಾಮ್ರಾಜ್ಯಶಾಹಿಗಳನ್ನು ಯುದ್ಧ ಕೋರ ನೀತಿಯನ್ನು ಅನುಸರಿಸಲು

[ಕಡೇ ಪುಟ ನೋಡಿ]

ಕನಿಷ್ಟ ಕೂಲಿ ಬಗ್ಗೆ ಸರಕಾರದ ಶಿಫಾರಸು ಜಾರಿಗೊಳಿಸಲು ಒತ್ತಾಯ

"ರಾಜ್ಯದಾದ್ಯಂತ ಬೀಡಿ ಕಾರ್ಮಿಕರ ಯಶಸ್ವೀ ಧರಣಿ ಸತ್ಯಾಗ್ರಹ"

ಕರ್ನಾಟಕದಲ್ಲಿ 6 ಲಕ್ಷ ಬೀಡಿ ಕಾರ್ಮಿಕರು ಬೆಲೆಯೇರಿಕೆಯಿಂದಾಗಿ ತತ್ತರಿಸುತ್ತಿದ್ದಾರೆ. 1000 ಬೀಡಿಗೆ ಕನಿಷ್ಠ 12 ರೂ. ಕೂಲಿಸಿಗಬೇಕೆಂದು ಹೋರಾಟ ನಡೆಸುತ್ತಿದ್ದಾರೆ. ರಾಜ್ಯ ಸರಕಾರ ಸಾವಿರ ಬೀಡಿಗೆ ಕನಿಷ್ಠ 8ರೂ.10ಪೈಸೆ ಕೂಲಿಆಗಬಹುದೆಂದು ನೋಟಿಫಿಕೇಷನ್ ಹೊರಡಿಸಿ ತಿಂಗಳುಗಳಾಗಿವೆ, ಕನಿಷ್ಠ ಕೂಲಿ ಸಮಿತಿಯು 8ರೂ. 10ಪೈಸೆ ಕೂಲಿ ಇರಬೇಕೆಂದು ಅಭಿಪ್ರಾಯಪಟ್ಟಿತ್ತು. ಅಡ್ವೈಸರಿ ಕಮಿಟಿಯೂ ಸಹ ಈ ಡ್ರಾಫ್ಟ್ ನೋಟಿಫಿಕೇಷನ್ ಅನುಮೋದಿಸಿ ಜಾರಿಮಾಡಲು ಬಹುಮತದಿಂದ ತೀರ್ಮಾನಿಸಿ ಸರಕಾರಕ್ಕೆ ಶಿಫಾರಸು ಮಾಡಿತ್ತು.

ಸರಕಾರ ಈ ಶಿಫಾರಸನ್ನು ಜಾರಿ ಮಾಡಲು ನಿಧಾನಿಸುತ್ತಿರುವುದನ್ನು ಪ್ರತಿಭಟಿಸಿ ರಾಜ್ಯದಾದ್ಯಂತ ಬೀಡಿ ಕಾರ್ಮಿಕರು ಸಿ. ಐ. ಟಿ. ಯು. ನೇತೃತ್ವದಲ್ಲಿ ಹೋರಾಟ ಮುಂದುವರೆಸಿದ್ದಾರೆ. ಅನೇಕ ಕಡೆ ಧರಣಿ ಸತ್ಯಾಗ್ರಹ ನಡೆಸಿದ್ದಾರೆ. ವರದಿಗಳು ಇಂತಿವೆ :

ಬೆಂಗಳೂರು

28-9-81ರಂದು ನೂರಾರು ಬೀಡಿಕಾರ್ಮಿಕರು ಬೆಂಗಳೂರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದರು. ನಗರದಲ್ಲಿದ್ದ ನಿಷೇದಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ನಡೆಸಿದರು. ಬೀಡಿಕಾರ್ಮಿಕರ ಫೆಡರೇಷನ್‌ನ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರ ನೇತೃತ್ವದಲ್ಲಿ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಕಂಡು ಮನವಿ ಅರ್ಪಿಸಿತು. ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿ ಕಾಂ. ಮುಹಮ್ಮದ್ ದಸ್ತಗೀರ್, ಸಯ್ಯದ್ ಜಲೀಲ್, ಶ್ರೀಮಂತಿ ಮುಹಬೂಬ್‌ಬಿ, ಜೀನತ್, ಬೇಬಿಜಾನ್ ಈ ಮೊದಲಾದವರಿದ್ದರು. ಹೆಚ್ಚಿಗೆ ಮುಸ್ಲಿಂ ಮಹಿಳಾ ಕಾರ್ಮಿಕರೇ ಇದ್ದ ಈ ಕಾರ್ಯಕ್ರಮವು ಬೆಂಗಳೂರಿನಲ್ಲಿ ಪರಿಣಾಮಕಾರಿಯಾಗಿ ನಡೆಯಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಯುತ ಧರಣಿ ನಡೆಸುತ್ತಿದ್ದ ಕಾರ್ಮಿಕರನ್ನು ಚದುರಿಸಲು ಪೋಲೀಸರು ಯತ್ನಿಸಿದರೂ ಸಫಲರಾಗಲಿಲ್ಲ. ನಂತರ ಧರಣಿ ನಡೆಸಿದ್ದ ಕಾರ್ಮಿಕರನ್ನುದ್ದೇಶಿಸಿ ಕಾಂ. ಸೂರ್ಯನಾರಾಯಣರಾವ್ ಮತ್ತು ಮುಹಮ್ಮದ್ ದಸ್ತಗೀರ್ ಮಾತನಾಡಿ ರಾಜ್ಯ ಮತ್ತು ಕೇಂದ್ರಸರಕಾರಗಳ ಕಾರ್ಮಿಕ ವಿರೋಧಿನೀತಿಯನ್ನು ಕಟುವಾಗಿ ಟೀಕಿಸಿ ಹೋರಾಟ ಮುಂದುವರೆಸಲು ಕರೆ ನೀಡಿದರು.

ಹರಿಹರ

ಸೆಪ್ಟೆಂಬರ್ 21ರಂದು ಹರಿಹರ ತಾಲ್ಲೂಕು ಬೀಡಿಕೆಲಸಗಾರರ ಸಂಘದ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ತಾಲ್ಲೂಕು ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಮಧ್ಯಾಹ್ನ ನೂರಾರು ಬೀಡಿ ಕಾರ್ಮಿಕರು ಮೆರವಣಿಗೆ ಹೊರಡಿಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಸಯ್ಯದ್‌ಸಾಬ್, ಮದಾರಸಾಬ್, ಉನ್ನಿತ್ತನ್, ಜಯಣ್ಣ ಅಮೀನಾಬಿ ಮತ್ತು ಕಾಂ. ಇಕ್‌ಬಾಲ್ ಹುಸೇನ್ ಮಾತನಾಡಿದರು.

ತಹಸೀಲ್ದಾರರ ಕಚೇರಿಬಳಿ ಕೆಂಬಾವುಟಗಳಿಂದ ಅಲಂಕರಿಸಿದ್ದ ಪೆಂಡಾಲಿನಲ್ಲಿ ಎಳೆಯ ಮಕ್ಕಳೊಂದಿಗೆ ಧರಣಿ ಕುಳಿತಿದ್ದ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹಾಗೂ ಮತ್ತಿನ್ನಿತರ ಸೌಲಭ್ಯಗಳನ್ನು ಜಾರಿಗೊಳಿಸಲು ಕಾಂಗ್ರೆ ಸರಕಾರ ನಿರಾಕರಿಸುತ್ತಿರುವುದನ್ನು ತಮ್ಮ ಪ್ರತಿಕ್ರಿಯೆಗಳ ಮೂಲಕ ಖಂಡಿಸಿದರು.

ಬಂಟ್ವಾಳ

ರಾಜ್ಯ ಬೀಡಿ ಫೆಡರೇಷನ್ನಿನ ಕರೆಯ ಮೇರೆಗೆ ಸೆಪ್ಟೆಂಬರ್ 21 ರಂದು ಬಂಟ್ವಾಳ ತಾಲ್ಲೂಕಿನ ಬೀಡಿ ಕೆಲಸಗಾರರು ಬಂಟ್ವಾಳ ತಹಸೀಲ್ದಾ

[ಕಡೇ ಪುಟ ನೋಡಿ]

ಜಿ.ಆರ್. ಇಂಜಿನೀಯರಿಂಗ್ ಕಾರ್ಮಿಕರ ಹೋರಾಟ

ಬೆಂಗಳೂರಿನ ವೈಟ್ ಫೀಲ್ಡ್‌ನಲ್ಲಿರುವ ಜಿ. ಆರ್ ಇಂಜಿನೀಯರಿಂಗಿನ ಸುಮಾರು 200 ಕಾರ್ಮಿಕರು ಕಳೆದ 60 ದಿನಗಳಿಂದ ಹೋರಾಟದಲ್ಲಿದ್ದಾರೆ. 12 ಜನ ಕಾರ್ಮಿಕರನ್ನು ಅಕ್ರಮವಾಗಿ ಆಡಳಿತವರ್ಗವು ವಜಾ ಮಾಡಿರುವುದನ್ನು ಪ್ರತಿಭಟಿಸಿ ಈ ಹೋರಾಟ ನಡೆದಿದೆ.

ಮಾಲೀಕರು ಸುಮುಖವಾಗಿ ಪ್ರಶ್ನೆಯನ್ನು ಇತ್ಯರ್ಥಪಡಿಸದೇ ಗೂಂಡಾಗಳನ್ನು ಬಿಟ್ಟು ಯೂನಿಯನ್ನನ್ನು ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಕನ್ಸಿಲಿಯೇಷನ್‌ಗೂ ಹಾಜರಾಗುತ್ತಿಲ್ಲ.

21-9-81 ರಂದು ಬೆಳಿಗ್ಗೆ ಕಾರ್ಮಿಕರು ಫ್ಯಾಕ್ಟರಿ ಬಳಿ ಶಾಂತಿಯುತ ಮತಪ್ರದರ್ಶನ ಮಾಡುತ್ತಿದ್ದ ಸಮಯದಲ್ಲಿ ಪೋಲೀಸರು ಆಗಮಿಸಿ ಲಾಠೀ ಪ್ರಹಾರಮಾಡಿ ಕಾರ್ಮಿಕರನ್ನು ಅಮಾನುಷವಾಗಿ ಥಳಿಸಿದ್ದಾರೆ. 60 ಜನ ಕಾರ್ಮಿಕರನ್ನು ಬಂಧಿಸಿ ಅವರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕಿ ಜುಡೀಷಿಯಲ್ ಕಸ್ಟಡಿಗೆ ಕಳಿಸಿದ್ದರು.. 60 ಜನ ಕಾರ್ಮಿಕರು 21-9-81 ರಿಂದ ಜೈಲಿನಲ್ಲಿದ್ದು ನ್ಯಾಯಾಧೀಶರು ಜಾಮೀನಿನ ಮೇಲೆ ಅವರನ್ನು ಬಿಡಲು ನಿರಾಕರಿಸಿದ್ದರು. ಕೊನೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟರು.

ಜೈಲಿನಿಂದ ಹೊರಬಂದ ಕಾರ್ಮಿಕರು ಹಸನ್ಮುಖಿಗಳಾಗಿದ್ದು ಗೆಲ್ಲುವವರೆಗೂ ಹೋರಾಟ ಮುಂದುವರೆಸುವದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಜಿ. ಆರ್. ಇಂಜಿನೀಯರಿಂಗ್‌ನ ಕಾರ್ಮಿಕರ ಮೇಲೆ ಪೋಲೀಸರು ದಾಳಿಮಾಡಿದ್ದನ್ನು ಸಂಘದ ಅಧ್ಯಕ್ಷ ಮತ್ತು ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ.ಟಿ.ಎಸ್. ಅನಂತರಾಂ ಉಗ್ರವಾಗಿ ಖಂಡಿಸಿ ಹೇಳಿಕೆ ಹೊರಡಿಸಿದ್ದಾರೆ. ಈ ಕುರಿತು ಸರಕಾರ ತೀವ್ರವಾಗಿ ಸೂಕ್ತ ತನಿಖೆ ನಡೆಸಬೇಕೆಂದೂ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ವಜಾ ಮಾಡಬೇಕೆಂದೂ ಒತ್ತಾಯಿಸಿದ್ದಾರೆ.

○

ನೊಂದವರಿಗೆ ಸಹಾಯ

ಇತ್ತೀಚಿಗೆ ಕೋಲಾರ ಜಿಲ್ಲೆಯ ಬಂಗಾರುಪೇಟೆ ತಾಲ್ಲೂಕಿನಲ್ಲಿ ಅಪರೂಪದ ಅತಿವೃಷ್ಟಿಯಿಂದ ಅನೇಕ ಜನ ಮನೆಮಾರು ಕಳೆದುಕೊಂಡಿದ್ದಾರೆ. ಬೆಳೆ ನಾಶವಾಗಿ ಲಕ್ಷಾಂತರ ರೂ. ನಷ್ಟವಾಗಿದೆ. ಮುಖ್ಯ ನಗರಗಳ ರಸ್ತೆ ಸಂಪರ್ಕ ಕಡಿದು ಹೋಗಿದ್ದು ಜನತೆಗೆ ತುಂಬಾ ತೊಂದರೆಯಾಗಿದೆ.

ಡಿ.ವೈ.ಎಫ್.ಐ.ನ ಬಂಗಾರುಪೇಟೆ ಘಟಕದ ಕಾರ್ಯಕರ್ತರು ಬಟ್ಟೆಗಳನ್ನು ಸಂಗ್ರಹಿಸಿ ನೊಂದ ಜನರಿಗೆ ವಿತರಿಸಲು ತಹಶೀಲ್ದಾರರಿಗೆ ನೀಡಿದ್ದಾರೆ.

ತ್ವರಿತ ರೀತಿಯಲ್ಲಿ ಕೆರೆಗಳ ಮತ್ತು ಹಾನಿಗೊಳಗಾದ ಸೇತುವೆಗಳ ದುರಸ್ತಿ ಕ್ರಮ ಕೈಗೊಳ್ಳಬೇಕೆಂದೂ. ಹಾನಿಗೊಳಗಾದ ಬೆಳೆಗಳ ಅಂದಾಜುಮಾಡಿ ರೈತರಿಗೆ ಪರಿಹಾರ ನೀಡುವುದು, ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರತಿಯೊಬ್ಬರಿಗೂ ಸೂಕ್ತ ಪರಿಹಾರ ನೀಡಬೇಕೆಂದು ಯುವಜನ ಸಂಘಟನೆಯ ಸಂಚಾಲಕ ಕಾಂ. ಪಿ. ಶ್ರೀನಿವಾಸ್ ತಹಶೀಲ್ದಾರರಿಗೆ ಒತ್ತಾಯಿಸಿದ್ದಾರೆ.

●

ಜಿಲ್ಲಾ ಸಮ್ಮೇಳನ

ಡಿ. ವೈ.ಎಫ್.ಐ.ನ ಶಿವಮೊಗ್ಗ ಜಿಲ್ಲಾ ಸಮ್ಮೇಳನವು ಸೆಪ್ಟೆಂಬರ್ 20 ರಂದು ಶಿವಮೊಗ್ಗೆಯಲ್ಲಿ ನಡೆಯಿತು.

ಕಾಂ. ಬಿ. ತಿರುಕಪ್ಪ ಇವರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಎನ್ನಾರ್ಪಿ ನಾಯ್ಕರು ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಆರಂಭದಲ್ಲಿ ಸಂಚಾಲಕರಾದ ಕಾಂ. ಆರ್. ಗೋಪಾಲ್‌ನಾಯ್ಕರು ವರದಿ ಮಂಡಿಸಿದರು. ಈ ವರದಿಯ ಮೇಲೆ ನಡೆದ ಚರ್ಚೆಯಲ್ಲಿ 9 ಜನ ಸಂಗಾತಿಗಳು ಭಾಗವಹಿಸಿದ್ದರು. ನಂತರ ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಲಾಯಿತು.

ಕಾಂ. ಕೆ. ಎಲ್. ರಾವ್ ಅವರು ಯುವಜನ ಸಂಘಟನೆಯ ಕುರಿತು ಸಂಕ್ಷಿಪ್ತ ವಿವರಣೆ ನೀಡಿ, ಈ ನಿಟ್ಟಿನಲ್ಲಿ ಯುವಜನ ಹೆಚ್ಚಿನ ಸಂಘಟನೆ, ಹೋರಾಟ ಹಾಗೂ ಸಮಾಜದ ಬದಲಾವಣೆಗೆ ಶ್ರಮಿಸಲು ಯುವಕರಿಗೆ ಒತ್ತಿಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಂ. ಚಂದೂಕುಂಟೆಯವರು ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಡಲು ಕರೆ ನೀಡಿದರು.

ಕೊನೆಯಲ್ಲಿ ಕಾಂ. ಬಿ. ತಿರುಕಪ್ಪ (ಅಧ್ಯಕ್ಷ), ಕಾಂ. ಲಕ್ಷ್ಮಣರಾವ್ (ಕಾರ್ಯದರ್ಶಿ), ಕಾಂ. ಕೃಷ್ಣಾಜಿ (ಖಜಾಂಚಿ) ಮತ್ತು ಸಿರಾಜುದ್ದೀನ್ ಪಾಷಾ (ಸಹಕಾರ್ಯದರ್ಶಿ) ಮತ್ತು 11 ಜನರ ಕಾರ್ಯಕಾರಿ ಸಮಿತಿಯ ಸದಸ್ಯರಿರುವ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆಮಾಡಲಾಯಿತು.

●

ಪರಿಹಾರ ಒದಗಿಸಲು ಆಗ್ರಹ

ಕಳೆದ ಆಗಸ್ಟ್ ತಿಂಗಳಿನಲ್ಲಿ ಬಿದ್ದ ಭಾರೀ ಮಳೆಯ ಪರಿಣಾಮವಾಗಿ ಮಲೆನಾಡಿನಲ್ಲಿ ಭತ್ತದ ಜಮೀನು ಕೊಚ್ಚಿ ಹೋಗಿರುವುದಲ್ಲದೇ ಭಾರೀ ಪ್ರಮಾಣದ ಮರಳು ಗದ್ದೆಗಳಲ್ಲಿ ತುಂಬಿ ಹೋಗಿ ಈ ಭಾಗದ ರೈತರಿಗೆ ತುಂಬಾ ಹಾನಿಯುಂಟಾಗಿದೆ.

ಈ ಭಾಗದ ರೈತರು ಪರಿಹಾರ ಕಾಮಗಾರಿಗೋಸ್ಕರ ಅರ್ಜಿ ಸಲ್ಲಿಸಿದ್ದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಂಡಿಲ್ಲ. ಕೆಲವೆಡೆ ಅಧಿಕಾರಿಗಳು ಪರಿಶೀಲಿಸಿ ಪರಿಹಾರವೆಂದು 50ರೂ.ಗಳಿಂದ 200ರೂ.ಗಳವರೆಗೆ ವಿತರಣೆ ಮಾಡಿರುತ್ತಾರೆ. ಹಾನಿಗೀಡಾಗಿರುವ ಎಲ್ಲಾ ರೈತರಿಗೂ ವಿಳಂಬ ಮಾಡದೆ ಯೋಗ್ಯ ಪರಿಹಾರವನ್ನು ಕೊಡಬೇಕೆಂದೂ, ಅತಿವೃಷ್ಟಿಯಿಂದಾಗುವ ಹಾನಿಯನ್ನು ತಡೆಯಲು ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಲೆನಾಡು ಪ್ರಾದೇಶಿಕ ಸಮಿತಿಯು ಸರಕಾರವನ್ನು ಒತ್ತಾಯಪಡಿಸಿದೆ.

ಆನೆಗಳ ಹಾವಳಿಯಿಂದ ತೊಂದರೆಗೊಳಗಾಗಿರುವ ರೈತರಿಗೆ ಕೂಡಲೇ ಪರಿಹಾರ ಒದಗಿಸಬೇಕೆಂದೂ ಸಮಿತಿ ಆಗ್ರಹಪಡಿಸಿದೆ.

ರಾಜ್ಯದಲ್ಲಿ ಏಲಕ್ಕಿ ಬೆಳೆಗಾರರಿಗೆ ಬೆಳೆದ ಏಲಕ್ಕಿಗೆ ಸೂಕ್ತ ಬೆಲೆ ಸಿಕ್ಕುವಂತೆ ಮಾಡಿ ಮಧ್ಯವರ್ತಿಗಳ ಹಿಡಿತದಿಂದ ರೈತರನ್ನು ಪಾರುಮಾಡಲು, ಏಲಕ್ಕಿ ಬೆಳೆಗಾರರಿಗೆ ಇತರ ಸೌಲಭ್ಯಗಳನ್ನೊದಗಿಸಲು ಕೂಡಲೇ ಏಲಕ್ಕಿ ಕಾರ್ಪೋರೇಷನ್ ರಚಿಸಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಲೆನಾಡು ಪ್ರಾದೇಶಿಕ ಸಮಿತಿಯು ಸರಕಾರವನ್ನು ಒತ್ತಾಯಪಡಿಸಿದೆ.

○

ಮೈಸೂರ್ ಕಿರ್ಲೋಸ್ಕರ್ ಕಾರ್ಮಿಕರ ವಿಸ್ತೃತ ಸಭೆ

ಹರಿಹರ

ಸೆಪ್ಟೆಂಬರ್ 19ರಂದು ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್ ಕಾರ್ಮಿಕರ ವಿಸ್ತೃತ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷ ಹಾಗೂ ರಾಜ್ಯ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ವಿ.ಜೆ.ಕೆ ನಾಯರ್ ವಹಿಸಿದ್ದರು.

ಪ್ರಾರಂಭದಲ್ಲಿ ಇತ್ತೀಚಿಗೆ ನಿಧನರಾದ ಸಿ. ಪಿ. ಐ. ಮುಖಂಡ ಕಾಂ. ಭೂಪೇಶ್‌ಗುಪ್ತ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಎ. ಬಾಲಸುಬ್ರಮಣ್ಯಂ ಮತ್ತು ಖ್ಯಾತ ಸಾಹಿತಿ ವೆಂಕಟರಾವ್ ಪಾನಸೆ ಇವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಪ್ರಧಾನಕಾರ್ಯದರ್ಶಿ ಕಾಂ. ಎನ್. ಜಿ. ಪಠಾಣ ಸಂಘದ ಚಟುವಟಿಕೆ ಕುರಿತು ವಿವರಿಸುತ್ತಾ, ಇತ್ತೀಚಿಗೆ ಆಡಳಿತವರ್ಗದೊಟ್ಟಿಗೆ ನಡೆದ ಮಾತುಕತೆಯ ವಿವರವನ್ನು ತಿಳಿಸಿದರು.

ಕಾಂ. ವಿ.ಜೆ.ಕೆ.ಯವರು ಮಾತನಾಡುತ್ತಾ ಒಪ್ಪಂದದ ಅನುಗುಣವಾಗಿ ಎಲ್ಲ ಕಾರ್ಮಿಕರಿಗೆ 20 ರೂ. ವಾರ್ಷಿಕ ಅಲೆವೆನ್ಸ್ ಮತ್ತು ಓ. ಟಿ. ವ್ಯತ್ಯಾಸದ ಹಣವನ್ನು ಆಡಳಿತವರ್ಗ ಕೊಡಲೊಪ್ಪಿರುವುದನ್ನು ತಿಳಿಸಿದರು.

ಕಾಂ. ವಿಜೆಕೆಯವರು ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಿ ನವೆಂಬರ್ 3ರಂದು ರಾಜ್ಯದಾದ್ಯಂತ ನಡೆಯಲಿರುವ ಸಾರ್ವತ್ರಿಕ ಮುಷ್ಕರ ಮತ್ತು ನವೆಂಬರ್ 23ರಂದು ನಡೆಯಲಿರುವ "ಪಾರ್ಲಿಮೆಂಟ್ ಚಲೋ" ಕಾರ್ಯಕ್ರಮ ಯಶಸ್ವಿಮಾಡಲು ಕರೆ ನೀಡಿದರು.

ಹುಬ್ಬಳ್ಳಿ

ಮೈಸೂರು ಕಿರ್ಲೋಸ್ಕರ್‌ನ ಹುಬ್ಬಳ್ಳಿ ಘಟಕದ ಕಾರ್ಮಿಕರ ಬಹಿರಂಗ ಸಭೆಯನ್ನು 21-9-81ರಂದು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕಾಂ. ವಿಜೆಕೆಯವರು ವಹಿಸಿದ್ದರು.

ಸಭೆಯಲ್ಲಿ ಹುಬ್ಬಳ್ಳಿ ಘಟಕದ ಕಾಂ. ವಿ. ಎಂ. ಪೂಜಾರ್ ಅವರು ಹರಿಹರದ ಸಭೆಯ ನಿರ್ಣಯ ಮತ್ತು ಆಡಳಿತವರ್ಗದೊಟ್ಟಿಗೆ ನಡೆದ ಮಾತುಕತೆಯ ವಿವರವನ್ನಿತ್ತರು.

●

ತಹಸೀಲ್ದಾರರ ಕಚೇರಿಗೆ ಘೆರಾವೋ

ಹರಿಹರ ಟೌನ್‌ನ ಹೊಸ ಬಡಾವಣೆಯಾದ ಹಳೇಹರ್ಲಾಪುರದಲ್ಲಿ ಆಹಾರ ವಿತರಣೆಯ ತೊಂದರೆಯಿಂದ್ದು ಅಲ್ಲಿನ ನಿವಾಸಿಗಳು 2-2-81ರಿಂದ ತಾಲ್ಲೂಕ್ ಆಫೀಸಿಗೆ ಈ ಕುರಿತು ಒತ್ತಾಯಿಸುತ್ತಲೇ ಇದ್ದರು. ಜಿಲ್ಲಾಧಿಕಾರಿಗಳಿಗೂ ಮನವಿ ಅರ್ಪಿಸಿದ್ದರೂ ಫಲಕಾರಿಯಾಗಿರಲಿಲ್ಲ.

ಎಂಟು ತಿಂಗಳಿಂದ ಆಹಾರಧಾನ್ಯ ವಿತರಣೆ ಇಲ್ಲದೇ ತೊಂದರೆಗೊಂಡ ಹಳೇಹರ್ಲಾಪುರದ ನಿವಾಸಿಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಕೆ. ರಾಮಯ್ಯ ಇವರ ನೇತೃತ್ವದಲ್ಲಿ ಮೆರವಣಿಗೆ ಹೊರಡಿಸಿ ತಹಶೀಲ್ದಾರರನ್ನು ಘೆರಾವೋ ಮಾಡಲಾಯಿತು. ಕೊನೆಗೂ ಜನರ ಒತ್ತಾಯಕ್ಕೆ ಮಣಿದ ತಹಶೀಲ್ದಾರರು ಆಹಾರಧಾನ್ಯ ವಿತರಣೆಮಾಡಲು ವ್ಯವಸ್ಥೆಮಾಡಿದರು.

○

ಬಸ್ ನೌಕರರ ಯಶಸ್ವೀ ಮುಷ್ಕರ

ಮಂಗಳೂರಿನ ಮೆ॥ ಎಸ್. ಸಿ. ಎಸ್. ಮೋಟಾರ್ಸ್‌ನ ಬಸ್ ನೌಕರರಿಗೆ ಕಾನೂನು ಪ್ರಕಾರ ಕೊಡಬೇಕಾದ ಸೌಲಭ್ಯಗಳನ್ನು ಕೊಡದಿರುವ ಕುರಿತು, ಮತ್ತು ನೌಕರರಿಗಾಗುವ ಕಿರುಕುಳ ಪ್ರತಿಭಟಿಸಿ ಈ ಕಂಪೆನಿಯ ಎಲ್ಲಾ ನೌಕರರು 24-9-81ರಂದು ಎಲ್ಲ ಬಸ್‌ಗಳನ್ನು ನಿಲ್ಲಿಸಿ ಯಶಸ್ವೀ ಮುಷ್ಕರ ನಡೆಸಿದರು.

ನಂತರ ಎ. ಎಲ್. ಸಿ. ಸಮ್ಮುಖದಲ್ಲಿ ವಿವಾದ ಕುರಿತು ಮಾತುಕತೆ ನಡೆದು ಬಸ್ ನೌಕರರಿಗೆ ಕಾನೂನು ಪ್ರಕಾರ ಸಿಗಬೇಕಾದ ಬೋನಸ್, ರಜಾ ಸೌಲಭ್ಯ, ಯೂನಿಫಾರಂ ಇತ್ಯಾದಿಗಳನ್ನು ಕೊಡಲು ಆಡಳಿತವರ್ಗದವರು ಒಪ್ಪಿದರು. ಮಾತುಕತೆಯಲ್ಲಿ ಕಾರ್ಮಿಕರ ಪರವಾಗಿ ಕಾಂ. ಪಿ. ರಾಮಚಂದ್ರರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಕೆ. ಮುಸಬ್ಬ ಭಾಗವಹಿಸಿದ್ದರು.

●

ಪೋಲಂಡ್: ಬೆಳೆಯುತ್ತಿರುವ ಪ್ರತಿಕ್ರಾಂತಿಕಾರಿ ಅಪಾಯ

"ಪರಿಸ್ಥಿತಿ ಗಂಭೀರವಾಗಿದೆ ಮಾತ್ರವಲ್ಲ, ದೇಶವನ್ನು ಅಪಾಯದ ಅಂಚಿನಲ್ಲಿ ತಂದಿರಿಸಿದೆ. ಹೀಗಲ್ಲದೆ ಬೇರೆ ಯಾವ ರೀತಿಯಲ್ಲೂ ಸ್ಥಿತಿಯನ್ನು ವಿವರಿಸಲು ಸಾಧ್ಯವಿಲ್ಲ"- ಕಳೆದ ಫೆಬ್ರುವರಿಯಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯು ಪೋಲಂಡಿನ ಪಕ್ಷದ ಸಂಗಾತಿಗಳಿಗೆ ಬರೆದ ಪತ್ರದ ಸಾಲುಗಳಿವು. ಸಮಾಜವಾದಿ ಪೋಲಂಡ್‌ನಲ್ಲಿ ನಡೆದಿರುವ ಪ್ರತಿಕ್ರಾಂತಿಕಾರಿ ಚಟುವಟಿಕೆಗಳ ಪರಿಣಾಮವನ್ನು ಈ ರೀತಿ ವಿವರಿಸಿದ ಪತ್ರವು ಇದನ್ನು ಹತೋಟಿಗೆತರಲು, ಸಮಾಜವಾದದ ರಕ್ಷಣೆಗೆ ಸಮರ್ಥ ಕ್ರಮಗಳನ್ನು ಕೈಗೊಳ್ಳಲು ಪೋಲಂಡದ ಸರಕಾರವು ಮುಂದೆ ಬರದಿರುವುದು ವಿಷಾದಕರ ಎಂದೂ ಕೂಡ ಎಚ್ಚರಿಸಿ ಏಳು ತಿಂಗಳುಗಳೇ ಕಳೆದವು.

ಪೋಲಂಡ ಕಮ್ಯುನಿಸ್ಟ್ ಪಕ್ಷದ ವಿಷಾದಕರ ನೀತಿಯನ್ನು ವಿವರಿಸುತ್ತ "ಸಮಾಜವಾದ ವಿರೋಧಿ ಶಕ್ತಿಗಳಿಗೆ ಕೊಟ್ಟ ರಿಯಾಯಿತಿಗಳಿಂದಾಗಿ ಪಿ.ಯು. ಡಬ್ಲ್ಯು.ಪಿ. ಸಾಮ್ರಾಜ್ಯಶಾಹಿ ಬಂಡಮೇಲುಗಾರರ ಸಹಾಯಪಡೆದ ಆಂತರಿಕ ಪ್ರತಿಕ್ರಾಂತಿಕಾರಿ ಶಕ್ತಿಗಳ ಹೊಡೆತದೆದುರು ಹೆಜ್ಜೆ-ಹೆಜ್ಜೆಯಾಗಿ ಹಿಂಜರಿಯುತ್ತ ಹೋಯಿತು"ಎಂದು ಕಟುವಾಸ್ತವವನ್ನು ಸೋವಿಯೆತ್ ಸಂಗಾತಿಗಳು ಹೇಳಿದರು. ತಾತ್ವಿಕವಾಗಿ ಇರುವ ಅಪಾಯವನ್ನು ಒಪ್ಪಿಕೊಂಡಿರುವ ಪೋಲಂಡ್‌ದ ಕಮ್ಯುನಿಸ್ಟರು ತಮ್ಮ ಪಕ್ಷದ 9ನೇ ಅಧಿವೇಶನದ ತರುವಾಯವೂ ಪ್ರತಿಕ್ರಾಂತಿಕಾರಿಗಳಿಗೆ ತಡೆಹಾಕಲು ಹಿಂದೇಟು ಹಾಕುತ್ತಿದ್ದಾರೆ. ಅಸಹಾಯಕ ಗಾಬರಿಯಲ್ಲಿ ರಿಯಾಯಿತಿಕೊಡುವ ನೀತಿಯನ್ನು ಇನ್ನೂ ಮುಂದುವರಿಸಿದ್ದಾರೆ.

ಸಾಲಿಡಾರಿಟಿ ಹೆಸರಿನಲ್ಲಿ ಮುನ್ನುಗ್ಗುತ್ತಿರುವ ಪ್ರತಿಕ್ರಾಂತಿಕಾರಿಗಳು ನಿಧಾನವಾಗಿ ಪೋಲಂಡದ ಸಮಾಜವಾದಕ್ಕೆ ಬೆಂಕಿ ಇಡಲು ಈ ರಿಯಾಯಿತಿ ಪಡೆಯು ತಂತ್ರವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಒಪ್ಪಂದಗಳ ಮೇಲೆ ಒಪ್ಪಂದಗಳು ಬರುತ್ತಿದ್ದರೂ ಸಾಲಿಡಾರಿಟಿ ಹೆಸರಿನ ಸಾಮ್ರಾಜ್ಯವಾದಿ ಬಂಟರು ತಮ್ಮ ಬೇಡಿಕೆಗಳ ಪಟ್ಟಿಯನ್ನು ವಿಸ್ತರಿಸುತ್ತಲೇ ನಡೆದಿದ್ದಾರೆ. ಸಮಾಜವಾದದ ನಿರ್ಮಾಣದಲ್ಲಿ ನಡೆದ ಗಣನೀಯ ಪ್ರಮಾದಗಳನ್ನು ಈ ಸಾಮ್ರಾಜ್ಯವಾದಿ ಬಂಟರು ತಮ್ಮ ಪ್ರತಿಕ್ರಾಂತಿಕಾರಿ ವಿಚ್ಛಿದ್ರಕಾರಿ ಚಟುವಟಿಕೆಗೆ ಬಳಸುತ್ತಿದ್ದಾರೆ. "ಸ್ವತಂತ್ರ" ಟ್ರೇಡ್ ಯೂನಿಯನ್‌ಗೆ ಮಾನ್ಯತೆ ನೀಡಿದ ಮೇಲೂ, ಚಳುವಳಿ ನಡೆಸುವ ಅವರ ಹಕ್ಕನ್ನು ಸರಕಾರ ಮನ್ನಿಸಿದಮೇಲೂ ಅವರು ಸುಮ್ಮನಿರಲು ಸಿದ್ಧರಿಲ್ಲ. ಔದ್ಯಮಿಕ ಘಟಕಗಳ ಮ್ಯಾನೇಜರುಗಳನ್ನು ನಿಯಮಿಸುವಲ್ಲಿಯೂ ತಮ್ಮ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸಿ ಅವರೀಗ ಅರ್ಧ ಸಫಲರಾಗಿದ್ದಾರೆಂದೇ ಹೇಳಬಹುದು. ಸೆಪ್ಟೆಂಬರ್ 25ರ ಒಪ್ಪಂದದ ಪ್ರಕಾರ ಈ ಮ್ಯಾನೇಜರುಗಳನ್ನು ಸರಕಾರ ನಿಯಮಿಸಿದರೆ ಅದನ್ನು ತಿರಸ್ಕರಿಸಬಹುದಾದ ಹಕ್ಕನ್ನು ಸರಕಾರದಿಂದ ಅವರು ಪಡೆದಿದ್ದಾರೆ. ಆರ್ಥಿಕ ಚಟುವಟಿಕೆಗಳಿಂದ ಪಕ್ಷವನ್ನು ಹೊರಗಿಟ್ಟು ತಮ್ಮ ಹತೋಟಿಯನ್ನು ಸ್ಥಾಪಿಸುವ ಮೂಲಕ ಪಕ್ಷದ ಆಂತರಿಕ ಒಗ್ಗಟ್ಟನ್ನು ಹುಡಿಮಾಡಿ ತನ್ಮೂಲಕ ರಾಜಕೀಯ ಅಧಿಕಾರ ಕಬಳಿಸುವ ತಮ್ಮ ಹೊಂಚಿನಲ್ಲವರು ಒಂದು ಹೆಜ್ಜೆ ಮುಂದೇ ಹೋಗಿದ್ದಾರೆ.

ಏಕೆಂದರೆ ಪಕ್ಷದೊಳಗೇ ಈ ಸಾಲಿಡಾರಿಟಿ ಏಜೆಂಟರು ತೂರಿಕೊಂಡಿದ್ದಾರಲ್ಲದೆ ಪಕ್ಷದ ರಾಜಕೀಯ ಮಂಡಲಿಯಲ್ಲೇ ಶೇಕಡಾ 40ರಷ್ಟು ಬೆಂಬಲಿಗರನ್ನವರು ಹೊಂದಿದ್ದಾರೆಂದು ವರದಿಗಳು ಸ್ಪಷ್ಟಪಡಿಸುತ್ತವೆ. ಹಾಗಾಗಿ, ತಮ್ಮ ಏಜಂಟರು ಪಕ್ಷದ ಹೆಸರಿನಿಂದಲೇ ಬರಬಹುದಾದ ಸಾಧ್ಯತೆಗಳು ಇರುವುದರಿಂದಲೇ ಅವರು ಈ ಸೂತ್ರಕ್ಕೆ ತಮ್ಮ ಒಪ್ಪಿಗೆ ನೀಡಿದ್ದಾರೆ. ಅಕಸ್ಮಾತ್ ನಿಷ್ಠಾವಂತ ಮಾರ್ಕ್ಸ್‌ವಾದಿ ಲೆನಿನ್‌ವಾದಿಗಳಿದ್ದರೆ ಅವರನ್ನು ತಿರಸ್ಕರಿಸಲು, ಮತ್ತು ವಿಷಯವನ್ನು ಕೋರ್ಟಿನೆದುರು ಮಂಡಿಸಲು ಅವರು ಹೇಗಿದ್ದರೂ ಅಧಿಕಾರಪಡೆದಿರುವುದರಿಂದ ಪೋಲೆಂಡಿನ ಸರಕಾರ ಪ್ರತಿಕ್ರಾಂತಿಕಾರಿಗಳ ಒತ್ತೂರಿಗೆ ಬಲಿಬೀಳುತ್ತಿರುವುದು ಸ್ಪಷ್ಟವಾಗಿದೆ. ಪಕ್ಷದ ಒಂಭತ್ತನೇ ಅಧಿವೇಶನದ ತರುವಾಯವೂ ಕೂಡ ಪರಿಸ್ಥಿತಿಯನ್ನು ಎದುರಿಸಲು ಬೇಕಾದ ಆಂತರಿಕ ಸ್ಥೈರ್ಯ ಹಾಗೂ ಒಗ್ಗಟ್ಟನ್ನು ಮೂಡಿಸುವಲ್ಲಿ ನಾಯಕತ್ವ ವಿಫಲವಾಗಿದೆ ಎಂದು ವಿಷಾದದಿಂದ ಹೇಳಬೇಕಿದೆ.

ಪಕ್ಷದ ಅಧಿವೇಶನದ ತರುವಾಯವೂ ಕೂಡ ಪ್ರತಿಕ್ರಾಂತಿಕಾರಿಗಳನ್ನು ಗುರುತಿಸುವ ಗೋಜಿಗೆ ನಾಯಕತ್ವ ಹೋಗಿಲ್ಲ. ಪರಿಣಾಮವಾಗಿ ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಬದ್ಧರಾಗಿರುವ ಶಕ್ತಿಗಳಿಗೆ ದಾಳಿಯನ್ನೆದುರಿಸಲು, ಸಮಾಜವಾದದ ಗಳಿಕೆಗಳನ್ನು ಉಳಿಸಿಕೊಳ್ಳಲು ಅವಶ್ಯವಾದ ಅಸ್ತ್ರವೇ ಇಲ್ಲದಂತಾಗಿದೆ.

ಇಂಥ ವಿಪರೀತ ಪರಿಸ್ಥಿತಿಗೆ ಒಂದು ನಿರ್ದಿಷ್ಟವಾದ ಹಿನ್ನೆಲೆ ಇದೆ. ಅದನ್ನು ತಿಳಿದುಕೊಂಡರೆ ಮಾತ್ರ ಸಾಮ್ರಾಜ್ಯವಾದಿಗಳ ನಾಯಕತ್ವದ ಇಂದಿನ ಪ್ರತಿಕ್ರಾಂತಿಕಾರಿ ಚಟುವಟಿಗಳು ಸರಿಯಾಗಿ ಅರ್ಥವಾಗಲು ಸಾಧ್ಯ.

ಪ್ರತಿಕ್ರಾಂತಿಗೆ ಪೂರ್ವ ಸಿದ್ಧತೆ

ಬಹಳ ಹಿಂದಿನಿಂದಲೇ ಅನುಸರಿಸಿಕೊಂಡು ಬಂದಿರುವಂಥ ತಪ್ಪು ಬಂಡವಾಳ ವಿನಿಯೋಗದ ನೀತಿಯಿಂದಾಗಿ ಜೀವನಾವಶ್ಯಕ ವಸ್ತುಗಳ ಕೊರತೆ ಮತ್ತು ಅವುಗಳ ಬೆಲೆಯಲ್ಲಿ ಹೆಚ್ಚಳದ ಪರಿಣಾಮವಾಗಿ ಪೋಲೆಂಡಿನಲ್ಲಿ ಆಗಾಗ ಕಾರ್ಮಿಕರ ಪ್ರತಿಭಟನೆಗಳು ನಡೆದದ್ದುಂಟು. ಡಿಸೆಂಬರ್ 12, 1970ರಲ್ಲಿ ಆಹಾರಧಾನ್ಯ ಹಾಗೂ ಅಡಿಗೆ ಅನಿಲದ ಬೆಲೆ ಹೆಚ್ಚಳವನ್ನು ಘೋಷಿಸಿದಾಗ ಅಂಥ ಪ್ರತಿಭಟನೆ ಬಂತು. ಆಗಲೂ ಸಾಮ್ರಾಜ್ಯವಾದಿಗಳು ಈಗಿನಂಥದ್ದೇ ಹೊಂಚನ್ನು ಹಾಕಿ ವಿಫಲರಾದರು. ಇದೇ ರೀತಿ 1976ರಲ್ಲೂ ಬೆಲೆಏರಿಕೆಯನ್ನು ಘೋಷಿಸಿದಾಗಲೂ ಪ್ರತಿಭಟನೆ ನಡೆಯಿತು. ಈ ಎರಡೂ ಬಾರಿ ಬೆಲೆಏರಿಕೆಯನ್ನು ತಡೆಗಟ್ಟುವಲ್ಲಿ, ಸರಕಾರದ ನಿರ್ಣಯವನ್ನು ಹಿಂತೆಗೆಸುವಲ್ಲಿ ಸಫಲತೆಯನ್ನು ಪಡೆದವು.

ಈ ಪರಿಸ್ಥಿತಿ ಉದ್ಭವವಾಗಲು ಒಂದು ಗಂಭೀರವಾದ ಸಮಸ್ಯೆಯೇ ಇದೆ. ಸಮಾಜವಾದಿ ಪರಿವರ್ತನೆಯ ಹಾದಿಯ ಕುರಿತಾದ ಸಮಸ್ಯೆ ಇದು. ಬಂಡವಾಳ ವಿನಿಯೋಗದಲ್ಲಿ ಜನತೆಯ ದೈನಂದಿನ ಅವಶ್ಯಕತೆಗಳ ಕಡೆಗೆ ಸರಿಯಾಗಿ ಗಮನಹರಿಸದಿರುವುದು, ಕೃಷಿರಂಗದಲ್ಲಿ ಆಧುನೀಕತೆಯನ್ನೂ, ಸಾಮೂಹೀಕರಣವನ್ನೂ ದೃಢಗೊಳಿಸದೆ ಖಾಸಗಿ ಹಿಡಿತವನ್ನು ಅಲ್ಲಿ ಬಲಪಡಿಸಿದ್ದು- ಪರಿಣಾಮವಾಗಿ ಉಂಟಾದ ಅವಶ್ಯಕ ವಸ್ತುಗಳ ಕೊರತೆಯನ್ನು ನೀಗಿಸಲು ಪಶ್ಚಿಮದ ಬಂಡವಾಳಶಾಹಿಗಳಿಂದ ವಿಪರೀತ ಸಾಲದ ಹೊರೆಯನ್ನು ಪೋಲಂಡದ ಜನತೆಯ ಮೇಲೆ ಹೇರಿದ್ದು. ಇದು ಸಾಲದೆಂಬಂತೆ ಪಕ್ಷದಲ್ಲಿ ಆಂತರಿಕ ಶಿಸ್ತನ್ನು ಬಲಹೀನಗೊಳಿಸಿ, ಆರ್ಥಿಕ ಅದಕ್ಷತೆಯನ್ನು ತಡೆಗಟ್ಟದಿರುವುದು, ಅಲ್ಲಲ್ಲಿ ಕಂಡುಬರುತ್ತಿದ್ದ ಭ್ರಷ್ಟತೆಯನ್ನು ಬಲವಾಗಿ ಹತ್ತಿಕ್ಕದಿರುವುದು ಎಲ್ಲ ನಡೆಯಿತು. ಪರಿಣಾಮವಾಗಿ ಅವಶ್ಯಕ ವಸ್ತುಗಳ ಬೆಲೆಏರಿಕೆ ಹಾಗೂ ಕೊರತೆಯನ್ನು ಮುಂದೆಮಾಡಿ ಉಂಟಾದ ಅಶಾಂತಿಯ ಸಂದರ್ಭವನ್ನು ಬಳಸಿಕೊಂಡು ಕಳೆದ ಒಂದು ದಶಕದಿಂದಲೇ ಅಲ್ಲಿ ಸಾಮ್ರಾಜ್ಯವಾದಿಗಳ ಏಜೆಂಟರಾಗಿ, ಪೋಲೆಂಡ್‌ನಲ್ಲಿ ಬಂಡವಾಳಶಾಹಿ ಪುನರುತ್ಥಾನದ ಮುಂಡಿಗೆ ತಿನ್ನುವ ಪ್ರತಿಕ್ರಾಂತಿಕಾರಿ ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ಈಗ ಇವುಗಳ ಮುಖಾಂತರವೇ ಇಂದು ಪ್ರತಿಕ್ರಾಂತಿಕಾರಿಗಳು ತಮ್ಮ ಚಟುವಟಿಕೆಯನ್ನು ಹರಡಲು, ಅಧಿಕಾರ ಕಬಳಿಸಲು ಮುಂದೆ ಬರುತ್ತಿರುವುದು. (KOR) "ಕಾರ್ಮಿಕರ ಸ್ವಯಂ ರಕ್ಷಣಾ ಸಂಸ್ಥೆ" ಎಂಬ ಸಂಸ್ಥೆಯೊಂದು 1970-71ರ ಪ್ರತಿಭಟನೆಗಳ ತರುವಾಯ ಅಸ್ತಿತ್ವಕ್ಕೆ ಬಂದ ಸಂಸ್ಥೆ. ಪಾಶ್ಚಾತ್ಯ ದೇಶಗಳ ಗುಪ್ತದಳಗಳ ಸಹಾಯದಿಂದ ಬದುಕಿರುವ ಈ ಸಂಸ್ಥೆ ಈಗ ಎಷ್ಟು ಮುಂದಕ್ಕೆ ಹೋಗಿದೆ ಎಂದರೆ ತಮ್ಮ ಈಗಿನ ಸಂಘವನ್ನು ಸಾಲಿಡಾರಿಟಿಯಲ್ಲಿ ವಿಲೀನಗೊಳಿಸುವ ಬಗ್ಗೆ ಸೂಚನೆಯನ್ನೂ ಮಂಡಿಸುತ್ತಿರುವರು. ಇದನ್ನು ಸಾಲಿಡಾರಿಟಿ ಒಪ್ಪಿಕೊಳ್ಳುವುದು ಖಂಡಿತ ಸಾಧ್ಯವಿದೆ. ಈವರೆಗೆ ಹೊರಗಿನಿಂದ ಪ್ರತಿಕ್ರಾಂತಿಕಾರಿ ಚಟುವಟಿಕೆಗಳಿಗೆ ಪ್ರಚೋದನೆ ನೀಡಿ ಅದಕ್ಕೊಂದು ಸ್ಪಷ್ಟರೂಪ ಬಂದ ಸಂದರ್ಭದಲ್ಲಿ ಅದರ ನೇರ ನಾಯಕತ್ವವಹಿಸುವ ಅವಶ್ಯಕತೆ ಅವರಿಗೆ ಕಂಡಿರಲು ಸಾಕು.

ಇಂದಿನ ಸೋಗಲಾಡಿ ವಾಲೇಸಾ ಕೂಡಾ 1970-71ರ ಪ್ರತಿಭಟನಾ ಸಮಯದಲ್ಲೇ ಹುಟ್ಟಿದ ನಾಯಕ. ಅದಕ್ಕಿಂತ ಮೊದಲಿನಿಂದಲೂ ಆತ ಕಮ್ಯುನಿಸ್ಟ್ ವಿರೋಧಿ "ಕಾರ್ಮಿಕ ಸಂಘ"ಗಳಲ್ಲಿ ಕೆಲಸಮಾಡುತ್ತಿದ್ದವ. ಪೋಲೆಂಡ್ ಸರಕಾರ ಆತನನ್ನು 1979ರಲ್ಲೇ ಕೆಲಸದಿಂದ ಕಿತ್ತುಹಾಕಿತ್ತು. ಆದರೆ 1980ರ ಆಗಸ್ಟ್ ಒಪ್ಪಂದದ ಪ್ರಕಾರ ಆತ ಕೆಲಸಕ್ಕೆ ಮರಳಿದ. ಆದರೆ ಮತ್ತೆ ತನ್ನ ಪ್ರತಿಕ್ರಾಂತಿಕಾರಿ ಚಟುವಟಿಕೆಗಳನ್ನು ತಕ್ಷಣ ಪ್ರಾರಂಭಿಸಿದ.

ಇಂದು ಜಗತ್ತಿನ ಬಂಡವಾಳಶಾಹಿ ಪತ್ರಿಕೆಗಳು ಆತನನ್ನು ದಿಢೀರನೇ ಉದಯಿಸಿದ, ಪೋಲೆಂಡಿನ ಕಾರ್ಮಿಕರ ಪ್ರೀತಿಯ ನಾಯಕನೆನ್ನುವಂತೆ ಬಣ್ಣಿಸಲು ಯತ್ನಿಸುತ್ತಿವೆ. ಆದರೆ ವಾಸ್ತವ ಸತ್ಯ ಬೇರೆ ಇದೆ. ಕಮ್ಯುನಿಸ್ಟ್ ವಿರೋಧಿ ಚಟುವಟಿಕೆಗಳಲ್ಲಿ ಸರಿಯಾಗಿ ಪಳಗಿದ ವ್ಯಕ್ತಿ ಈತ ಎನ್ನುವುದನ್ನೂ ಈ ಪತ್ರಿಕೆಗಳು ಮರೆಮಾಚುತ್ತಿವೆ. ಸಾಮ್ರಾಜ್ಯವಾದಿಗಳ ಗುಪ್ತ ಸಂಸ್ಥೆಗಳೊಂದಿಗೆ ಹಳೆಯ ಸಂಬಂಧಗಳನ್ನೂ ಈತ ಹೊಂದಿರುವನೆಂಬುದನ್ನು ಈ ಪತ್ರಿಕೆಗಳು ಉದ್ದೇಶಪೂರ್ವಕವಾಗಿ ಬಚ್ಚಿಡುತ್ತಿವೆ. ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ವಿರೋಧಿ ಪತ್ರಿಕೆಯಾದ 'Problems of Communism' ಬರೆದಿರುವ ಈ ಮಾತುಗಳು ಗಮನಾರ್ಹ: "ಈ ಪ್ರತಿಭಟನಾ ಚಳುವಳಿಯ ವಿಸ್ತರಣೆ ಹಾಗೂ ಗೆಲುವಿಗೆ ಪ್ರಾರಂಭದಲ್ಲಿ ಕಾರ್ಮಿಕರಿಗೆ ವಿರೋಧಿ ಗುಂಪುಗಳು ನೀಡಿದ ಸಹಾಯ ಮಹತ್ವದ್ದಾಗಿದೆ" ಇಂದಿನ ಸಮಸ್ಯೆಗೆ ಈ ಸಾಲುಗಳು ಸಂಪೂರ್ಣ ಕನ್ನಡಿ ಹಿಡಿಯುವಂತಿವೆ. ಸಾಲಿಡಾರಿಟಿಯನ್ನು ಹುಟ್ಟಿಸಿದವರೇ ಈ ವಿಚ್ಛಿದ್ರಕಾರಿಗಳೆಂಬುದು ಖಂಡಿತ ಮರೆಯಲಾಗದಲ್ಲದೆ ವಿವಿಧ ಸ್ಟ್ರೈಕ್ ಕಮಿಟಿಗಳನ್ನು ಸೇರಿಸುವುದಕ್ಕೆ ವಾಲೇಸಾ ನಾಯಕತ್ವ ನೀಡಿದನ್ನೆನ್ನುವುದನ್ನೂ ಮರೆಯಲಾಗದು.

ಈ ಹಿನ್ನೆಲೆ, ಘಟನಾವಳಿಗಳನ್ನು ಗಮನಿಸಿದರೆ ಸಾಮ್ರಾಜ್ಯವಾದಿಗಳು ತಮ್ಮ ಪ್ರತಿಕ್ರಾಂತಿಕಾರಿ ಚಟುವಟಿಕೆಗಳನ್ನು ಇಲ್ಲಿ ನಡೆಸಿಕೊಂಡು ಬರಲು, ಅದಕ್ಕೆ ಪೂರ್ವಸಿದ್ಧತೆ ಮಾಡಿಕೊಂಡಿರಲು ಸಾಕಷ್ಟು ಅವಕಾಶವಿತ್ತು.

ರಾಜಕೀಯ ದುರುದ್ದೇಶಗಳ ಬೇಡಿಕೆ ಪಟ್ಟಿ

ಮೊದಮೊದಲು ಹದಿನಾರು ಬೇಡಿಕೆಗಳನ್ನೊಳಗೊಂಡ ಒಂದು ಪಟ್ಟಿಯನ್ನು ಈ ಪ್ರತಿಕ್ರಾಂತಿಕಾರಿಗಳು ಮುಂದಿಟ್ಟರು. ನಂತರ ಅವುಗಳನ್ನು 21ಕ್ಕೆ ಏರಿಸಿದರು. ಇವುಗಳಲ್ಲಿ ಹದಿನೈದು ಬೇಡಿಕೆಗಳು ಕಾರ್ಮಿಕರ ವೇತನ, ಕೆಲಸದ ಸಮಯದಲ್ಲಿ ಭದ್ರತೆ ಮುಂತಾದ ತೊಂದರೆಗಳಿಗೆ ಪರಿಹಾರ ಬಯಸುವವಾಗಿದ್ದರೆ ಉಳಿದವುಗಳು ಸಂಪೂರ್ಣ ರಾಜಕೀಯ ದುರುದ್ದೇಶ ಪೂರಿತ ಪ್ರತಿಕ್ರಾಂತಿಕಾರಿ ಬೇಡಿಕೆಗಳು. ಈ ಉಳಿದ ಬೇಡಿಕೆಗಳ ವಿಷಯದಲ್ಲಿ ಅವರು ಸರಕಾರದೊಂದಿಗೆ ಮಾತುಕತೆ ನಡೆಸಲೂ ಸಿದ್ಧರಿಲ್ಲವೆಂದವರು ಮೊದಲು ಘೋಷಿಸಿದರು. ಅವುಗಳಲ್ಲಿ ಮೊದಲನೆಯದು ಈ ಪ್ರತಿಕ್ರಾಂತಿಕಾರಿಗಳ ಸಾಲಿಡಾರಿಟಿಯನ್ನು ಮನ್ನಿಸುವುದು. ಚಳುವಳಿ ಮಾಡುವ ಹಕ್ಕನ್ನೂ ಅವರಿಗೆ ನೀಡುವುದಾಗಿತ್ತು. ಮೊದಲೇ ಹೇಳಿದಂತೆ ಸರಕಾರ ಅದನ್ನವರಿಗೆ ನೀಡಿತು. ಅದರಲ್ಲಿ ಇನ್ನೊಂದು ಬೇಡಿಕೆ "ಸ್ವತಂತ್ರ ಅಭಿವ್ಯಕ್ತಿ"ಯನ್ನೂ ಬೇಡುವಂಥದ್ದು. ಇವರು ನಡೆಸುವ ಎಲ್ಲ ಚಟುವಟಿಕೆಗಳಿಗೆ ರಾಷ್ಟ್ರೀಯ ಪ್ರಸಾರ ಮಾಧ್ಯಮದಲ್ಲಿ ಸ್ಥಾನ ಕೊಡುವುದು, ತಮ್ಮದೇ ಆದ ಪ್ರಕಟಣೆಗಳನ್ನೂ ಹೊರಡಿಸಲು ಅನುಮತಿ ನೀಡುವುದು, ಹಿಂದಿನ "ರಾಜಕೀಯ ಕೈದಿಗಳ"ನ್ನು ಬಿಡುಗಡೆಮಾಡಿ ಮತ್ತೆ ಅವರನ್ನು ನೆಲೆಗೊಳಿಸುವುದು, ದೇಶದಲ್ಲಿ ತರಬೇಕಾದ ಸುಧಾರಣೆಗಳ ಕುರಿತು ರಾಷ್ಟ್ರೀಯ ಚರ್ಚೆಯೊಂದನ್ನು ಪ್ರಾರಂಭಿಸುವುದು, ಫ್ಯಾಕ್ಟರಿಗಳ ಮ್ಯಾನೇಜರುಗಳನ್ನು ನಿಯಮಿಸುವ ಹಕ್ಕನ್ನು ತಾನೇ ಪಡೆಯುವುದು, ಪಾರ್ಲಿಮೆಂಟಿನಲ್ಲಿ ಮಸೂದೆಗಳನ್ನೂ ಮಂಡಿಸಲು ಹಕ್ಕು ಪಡೆಯುವುದು ಇವೆಲ್ಲ ಸೇರಿವೆ. ಕೊನೆಯ ಮೂರನ್ನುಳಿದು ಉಳಿದೆಲ್ಲವುಗಳನ್ನೂ ಸರಕಾರ ಒಪ್ಪಿಕೊಂಡಿತು. ಮ್ಯಾನೇಜರುಗಳನ್ನು ನಿಯಮಿಸುವ ಬೇಡಿಕೆಯ ಕುರಿತೂ ಒಂದು ಸೂತ್ರವನ್ನು ಸಾಲಿಡಾರಿಟಿ ಒಪ್ಪಿದೆ ಎಂದು ಆಗಲೇ ನಾನು ನಮೂದಿಸಿರುವೆ. ಇನ್ನು ಉಳಿದಿರುವುದು ಕೊನೆಯದೊಂದೇ. ಅದನ್ನೂ ಒಪ್ಪಿಕೊಂಡರೆ ಸದ್ಯದ ನಾಟಕದ ಒಂದು ಅಂಕ ಸಂಪೂರ್ಣಗೊಂಡು ಎರಡು ಶಕ್ತಿಗಳ ಅಧಿಕಾರ ಹಪ್ಪಿಗೆ ಪೋಲೆಂಡಿನಲ್ಲಿ ಸಂಪೂರ್ಣವಾಗಿ ಪ್ರಾರಂಭವಾಗೇ ತಿರುವುದು. ಈಗಾಗಲೇ ಅದು ಪ್ರಾರಂಭವಾಗಿದೆ. ಈ ನಾಟಕದ ಕೊನೆಯ ಅಂಕ ಅಧಿಕಾರವನ್ನು ಸಾಲಿಡಾರಿಟಿ ಸಂಪೂರ್ಣ ಕಬಳಿಸಿ ಸಮಾಜವಾದವನ್ನು ನಾಶ ಮಾಡುವುದು.

(6ನೇ ಪುಟ ನೋಡಿ)

ವಿಭಿನ್ನ ಪ್ರವೃತ್ತಿಗಳನ್ನು ಒಂದಾಗಿರಿಸುವ ಪ್ರಯತ್ನ

ಸಿ.ಪಿ.ಐ. ರಾಷ್ಟ್ರೀಯ ಕೌನ್ಸಿಲಿನ ನಿರ್ಣಯ

(ಸಿ. ಪಿ. ಐ. ನ ರಾಷ್ಟ್ರೀಯ ಕೌನ್ಸಿಲ್ ಆಗಸ್ಟ್ 31, 1981ರಂದು ಅಂಗೀಕರಿಸಿದ ನಿರ್ಣಯದ ಬಗ್ಗೆ ಕಾಂ. ಎಂ. ಬಸವಪುನ್ನಯ್ಯ ಅವರು ಬರೆದಿರುವ ಲೇಖನದ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ.)

ಸಿ.ಪಿ.ಐ.ನ ರಾಷ್ಟ್ರೀಯ ಕೌನ್ಸಿಲ್ ಅಂಗೀಕರಿಸಿದ ಆಗಸ್ಟ್ 31, 1981ರ ನಿರ್ಣಯದ ಶೀರ್ಷಿಕೆ ಹೀಗಿದೆ :- "ರಾಷ್ಟ್ರೀಯ ಕೌನ್ಸಿಲಿನ ಕಳೆದ ಸಭೆಯ ಬಳಿಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಂಗದಲ್ಲಿ ನಡೆದ ಪ್ರಮುಖ ವಿದ್ಯಮಾನಗಳು." ಶೀರ್ಷಿಕೆಯಿಂದಲೇ ಉದ್ಭವವಾಗಿರುವ, ತುಂಬಾ ಶ್ರಮವಹಿಸಿ ಸಿದ್ಧಪಡಿಸಲಾದ ಈ ನಿರ್ಣಯದಲ್ಲಿ ವಿಷಯಗಳು ಚದುರಿದಂತಿದ್ದು ಅದು ಗೊತ್ತುಗುರಿಯಿಲ್ಲದೆ ಸಾಗಿದೆ. ನಿರ್ಣಯದಲ್ಲಿ ಚರ್ಚಿಸಲಾಗಿರುವ ಅನೇಕ ವಿಷಯಗಳ ಕುರಿತು ಇರುವ ಬೇರೆಬೇರೆ ಅಭಿಮತಗಳನ್ನು ಒಂದಾಗಿರಿಸುವ ಪ್ರಯತ್ನವನ್ನು ಸಿ. ಪಿ. ಐ. ಮುಂದಾಳುತ್ವ ಇಲ್ಲಿ ನಡೆಸಿದೆಯೆಂದೂ ಅನಿಸಬಹುದು. ಆದರೆ ನಿರ್ಣಯ ನಡೆಸಿರುವ ವಿಶ್ಲೇಷಣೆಗೂ ಅದರ ತೀರ್ಮಾನಕ್ಕೂ ಯಾವುದೇ ಹೊಂದಾಣಿಕೆ ಕಾಣಿಸುತ್ತಿಲ್ಲ. ಪಕ್ಷದೊಳಗೇ ಇರುವ ಎಲ್ಲ ವಿಭಿನ್ನ ಅಭಿಪ್ರಾಯಗಳಿಗೂ ಸಮ್ಮತವಾಗುವಂತೆ ಮಾಡಲು ನಿರ್ಣಯದಲ್ಲಿ ಬೇಕಾದುವನ್ನೆಲ್ಲ ಸೇರಿಸಲಾಗಿದೆ. ಆದರೆ ಹೀಗೆ ಮಾಡುವಾಗ ನಿರ್ಣಯ ಯಾವುದೇ ಗೊತ್ತುಗುರಿಯನ್ನಾಗಲೀ ಉದ್ದೇಶವನ್ನಾಗಲೀ ಉಳಿಸಿಕೊಂಡಿಲ್ಲ. ರಾಷ್ಟ್ರೀಯ ಕೌನ್ಸಿಲ್ ಮೂರು ಬೇರೆ ಬೇರೆ ಪ್ರವೃತ್ತಿಗಳನ್ನು ಪ್ರತಿಬಿಂಬಿಸುತ್ತಿದೆ. ಮೊದಲನೆಯದು ಕಾಂಗ್ರೆಸ್ (ಐ)ಗೆ ವಿರುದ್ಧವಾದ ನಿಲುವು. ಎರಡನೆಯದು ಸಿ. ಪಿ. ಐ. (ಎಂ)ಗೆ ವಿರೋಧಿಯಾದ ಪ್ರವೃತ್ತಿ. ಮೂರನೆಯದು ಬೂರ್ಶ್ವಾ ವಿರೋಧ ಪಕ್ಷಗಳು ಅದರಲ್ಲೂ ಬಿ. ಜೆ. ಪಿ.ಯನ್ನು ಅತ್ಯಂತ ಬಲ ಪ್ರತಿಗಾಮಿ ಪಕ್ಷವೆಂದು ಪರಿಗಣಿಸಿ ಅದರ ವಿರುದ್ಧ ನಡೆಸಬೇಕಾದ ಹೋರಾಟಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಪ್ರತಿಪಾದಿಸುವ ನಿಲುವು. ಈ ಮೂರು ಪ್ರವೃತ್ತಿಗಳನ್ನು ಆರಿಸಿ ತೆಗೆದು ಮಾಡಲಾದ ಮಿಶ್ರಣವೇ ಸಿ. ಪಿ. ಐ.ನ ರಾಷ್ಟ್ರೀಯ ಕೌನ್ಸಿಲಿನ ನಿರ್ಣಯ. ಹಾಗಾಗಿ ಅದು ಆಕಡೆಗೂ ಇಲ್ಲ; ಈಕಡೆಗೂ ಇಲ್ಲ.

ಆದರೂ ನಿರ್ಣಯದಲ್ಲಿ ಸರಿಯಾದ ವಿಷಯಗಳನ್ನು ಹೇಳಲೇ ಇಲ್ಲವೆಂದಲ್ಲ. ಅಮೇರಿಕಾ ಸಾಮ್ರಾಜ್ಯಶಾಹಿಯ ಕುರಿತು, ಆಕ್ರಮಣಶೀಲ ಧೋರಣೆಗಳ ಮೂಲಕ ಅದು ಜಾಗತಿಕ ಶಾಂತಿಗೆಉಂಟುಮಾಡಿರುವಅಪಾಯ, ವಿವಿಧ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ತಂದೊಡ್ಡಿರುವ ಬೆದರಿಕೆ ಮತ್ತು ಸಮಾಜವಾದಿ ಜಗತ್ತಿಗೆ, ಅದರಲ್ಲೂ ಸೋವಿಯೆತ್ ರಷ್ಯಾದ ವಿರುದ್ಧ ಅದು ಕತ್ತಿಮಸೆಯುತ್ತಿರುವುದು ಇತ್ಯಾದಿಗಳ ಬಗ್ಗೆ ರಾಷ್ಟ್ರೀಯ ಕೌನ್ಸಿಲಿನ ನಿರ್ಣಯ ಹಲವಾರು ವಿಷಯಗಳನ್ನು ಸರಿಯಾಗಿಯೇ ಹೇಳಿದೆ. ಸೋವಿಯೆತ್ ಒಕ್ಕೂಟವೊಂದನ್ನೇ ತನ್ನೆಲ್ಲ ಟೀಕೆಗಳಿಗೆ ಕೇಂದ್ರವಾಗಿ ಮಾಡಿರುವ ಸಮಾಜವಾದಿ ಚೀನಾದ ನೀತಿ ಸಂಪೂರ್ಣ ತಪ್ಪಾದರೂ ಅದನ್ನು ಟೀಕಿಸುವ ಉತ್ಸಾಹದಲ್ಲಿ ಅಥವಾ ಅತ್ಯುತ್ಸಾಹದಲ್ಲಿ ರಾಷ್ಟ್ರೀಯ ಕೌನ್ಸಿಲಿನ ನಿರ್ಣಯವು ಚೀನಾವನ್ನು ಸಮಾಜವಾದಿ ಜಗತ್ತಿನಿಂದಲೇ ಹೊರತಳ್ಳಿಬಿಟ್ಟಿದೆ. ಅಂತರರಾಷ್ಟ್ರೀಯ ರಂಗದಲ್ಲಿ ಸಾಮ್ರಾಜ್ಯಶಾಹಿಯು ನಡೆಸುತ್ತಿರುವ ಅನಾಹುತವನ್ನು "ವಾಷಿಂಗ್ಟನ್-ಬೀಜಿಂಗ್-ಇಸ್ಲಾಮಾಬಾದ್ ಷಡ್ಯಂತ್ರ"ವೆಂದು ತೀರ್ಮಾನಿಸಿಬಿಟ್ಟಿರುವ ಈ ನಿರ್ಣಯ ತನ್ನ ಟೀಕೆಯ ಹೆಚ್ಚಿನಂಶವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಯ ಬದಲು ಚೀನಾದ ಮೇಲೆಯೇ ಹರಿಯಬಿಟ್ಟಿದೆ.

ಜನಸಾಮಾನ್ಯರ ಸಮಸ್ಯೆಗಳ ವಿಷಯದಲ್ಲಿ ಎಲ್ಲರ ಸಹಕಾರವನ್ನೂ ಬಯಸುವ ಈ ನಿರ್ಣಯ ಇಂತಹ ಪ್ರಶ್ನೆಗಳ ಕುರಿತು ಪ್ರಜಾತಾಂತ್ರಿಕ ಮತ್ತು ಜಾತ್ಯತೀತ ಶಕ್ತಿಗಳು ರಾಜ್ಯಮಟ್ಟದಲ್ಲಿ ಸಮಾವೇಶ ನಡೆಸಬೇಕೆಂದೂ ಕರೆ ನೀಡಿದೆ. ಈ ಮೂಲಕ ಅದು ಇತರ ಬೂರ್ಶ್ವಾ ವಿರೋಧ ಪಕ್ಷಗಳೆಲ್ಲ ಬಲ-ವಿರೋಧಿ ಪಕ್ಷಗಳೆಂದೂ ತೀವ್ರ ಪ್ರತಿಗಾಮಿಗಳೆಂದೂ ತಿರಸ್ಕರಿಸಿಬಿಟ್ಟಿದೆ.

ಇಂದಿರಾ ಗಾಂಧಿ ನೇತೃತ್ವದ ಸರಕಾರ ಅನುಸರಿಸುತ್ತಿರುವ ಜನವಿರೋಧಿ ನೀತಿ, ಐ.ಎಂ.ಎಫ್., ಮತ್ತು ಜಾಗತಿಕ ಬ್ಯಾಂಕಿನ ಮೇಲೆ ಅದು ಅವಲಂಬಿಸಿಕೊಂಡಿರುವ ಕಾರಣ ಆಗುತ್ತಿರುವ ಅನಾಹುತ, ಕಾಂಗ್ರೆಸ್ (ಐ) ಪಕ್ಷದ ಪ್ರಜಾತಂತ್ರ ವಿರೋಧಿ ಸ್ವರೂಪ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶಗೊಳಿಸಿ ಅದರ ಸ್ಥಾನದಲ್ಲಿ ಅಧ್ಯಕ್ಷೀಯ ವ್ಯವಸ್ಥೆಯನ್ನು ಜನತೆಯ ಮೇಲೆ ಹೇರಲು ಇಂದಿರಾ ಗಾಂಧಿ ನಡೆಸುತ್ತಿರುವ ಪ್ರಯತ್ನ ಮತ್ತು ವ್ಯಕ್ತಿ ಪೂಜೆಯ ಜೊತೆಗೆ ವಂಶಪಾರಂಪರ್ಯ ಆಳ್ವಿಕೆಯನ್ನು ಮುಂದುವರಿಸಲು ಆಕೆಯ ಸನ್ನಾಹ ಇತ್ಯಾದಿಗಳನ್ನು ನಿರ್ಣಯವು ಸರಿಯಾಗಿಯೇ ಗುರುತಿಸಿದೆಯಲ್ಲದೆ ಸರ್ವಾಧಿಕಾರದ ಅಪಾಯವನ್ನು ಸ್ಪಷ್ಟವಾಗಿ ಮಂಡಿಸಲಾಗಿದೆ. ಆದರೂ ಈ ಅಪಾಯಗಳನ್ನೆದುರಿಸಲು ನಡೆಸಬೇಕಾದ ಹೋರಾಟದ ಸ್ವರೂಪವನ್ನು ವಿಶದಪಡಿಸಲಾಗಿಲ್ಲ; ಹೋರಾಟದಲ್ಲಿ ಎಡ ಶಕ್ತಿಗಳನ್ನಷ್ಟೇ ಅಲ್ಲದೆ ಇನ್ನೂ ವಿಶಾಲ ತಳಹದಿಯ ಜನತೆಯನ್ನು ತೊಡಗಿಸಲು ಸಾಧ್ಯವೇ ಎನ್ನುವುದನ್ನೂ ಅದು ವಿಶ್ಲೇಷಿಸಿಲ್ಲ. ಈಗಿನ ರಾಜಕೀಯ ಪರಿಸ್ಥಿತಿಯನ್ನೆದುರಿಸಲು ಎಲ್ಲ ವರ್ಗ ಹೋರಾಟ, ಸಾಮುದಾಯಿಕ ಚಳುವಳಿ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳಿಗೆ ಎಡ ಪಕ್ಷಗಳೇ ನೇತೃತ್ವ ನೀಡುವ ಮೂಲಕ ಎಡ ಪ್ರಜಾಸತ್ತಾತ್ಮಕ ಬದಲಿ ಶಕ್ತಿಯೊಂದರ ನಿರ್ಮಾಣವೇ ಏಕ ಮಾರ್ಗ ದಾರಿ ಎಂದು ಅದು ತೀರ್ಮಾನಿಸಿಬಿಟ್ಟಿದೆ.

ರಾಷ್ಟ್ರೀಯ ಕೌನ್ಸಿಲಿನ ನಿರ್ಣಯ ಅಕಾರಣವಾಗಿ ಸಿ. ಪಿ. ಐ. (ಎಂ) ಪಕ್ಷದ ಮೇಲೂ ಕೆಂಡಕಾರಿದೆ. ಸ್ವತಃ ತೂಗುಯ್ಯಾಲೆ ಸ್ಥಿತಿಯಲ್ಲಿರುವ ಬೂರ್ಶ್ವಾ ವಿರೋಧಿ ಪಕ್ಷಗಳನ್ನು ಸಿ. ಪಿ. ಐ. (ಎಂ) ಓಲೈಸುತ್ತಿದೆಯೆಂದೂ ಈಗಿನ ಪರಿಸ್ಥಿತಿಯಲ್ಲಿ ನಿರ್ಣಾಯಕ ಪಾತ್ರವಹಿಸಲು ಅದು ಮುಂದೆ ಬರುತ್ತಿಲ್ಲವೆಂದೂ ಟೀಕಿಸಲಾಗಿದೆ. ಕೇರಳ ಮತ್ತು ಪ. ಬಂಗಾಳ ರಾಜ್ಯಗಳ ಸಂಯುಕ್ತರಂಗ ಸರ್ಕಾರಗಳನ್ನು ಪತನಗೊಳಿಸಲು ಇಂದಿರಾ ಗಾಂಧಿ ನಡೆಸುತ್ತಿರುವ ಸನ್ನಾಹದ ಹಿನ್ನೆಲೆಯಲ್ಲಿ ಈ ಸರ್ಕಾರಗಳನ್ನು ಉಳಿಸಿಕೊಳ್ಳಲು ಸಿ.ಪಿ.ಐ.(ಎಂ)ನ ಮುಂದಾಳುಗಳು ಮತ್ತೊಮ್ಮೆ ಬಿ.ಜೆ.ಪಿ.ಯ ಜೊತೆಗೆ ಚಕ್ಕಂದವಾಡುತ್ತಿದ್ದಾರೆಂದೂ ಈ ನಿರ್ಣಯ ದೂಷಿಸಿದೆ.

ಸಾಮಾನ್ಯ ಜನತೆಯ ಸಮಸ್ಯೆಗಳು ಮತ್ತು ಹೊಸ ವ್ಯವಸ್ಥೆಯೊಂದರ ನಿರ್ಮಾಣಕ್ಕಾಗಿ ಎಡ ಪ್ರಜಾಸತ್ತಾತ್ಮಕ ರಂಗ ಹಾಗೂ ಸರ್ವಾಧಿಕಾರವನ್ನು ವಿರೋಧಿಸಲು ವಿಶಾಲ ತಳಹದಿಯ ಇನ್ನೊಂದು ರಂಗ-ಹೀಗೆ ಎರಡು ಬೇರೆ ಬೇರೆ ರಂಗಗಳ ನಿರ್ಮಾಣಕ್ಕೆ ಕರೆ ನೀಡುವ ಜಲಂಧರ್ ಕಾಂಗ್ರೆಸ್‌ನ ರಾಜಕೀಯ ನಿರ್ಣಯವನ್ನು ಸಿ.ಪಿ.ಐ.(ಎಂ) ಮತ್ತೆ ಅಗೆದು ತೆಗೆದಿದೆಯೆಂದೂ, ಇದರಲ್ಲಿ ಎರಡನೆಯದಾದ ವಿಶಾಲ ತಳಹದಿಯ ರಂಗಕ್ಕೇ ಎಡ ಪ್ರಜಾಸತ್ತಾತ್ಮಕ ರಂಗಕ್ಕಿಂತ ಹೆಚ್ಚಿನ ಆದ್ಯತೆ ನೀಡಲಾಗಿದೆಯೆಂದೂ ಸಿ.ಪಿ.ಐ.ನ ನಿರ್ಣಯ ಆರೋಪಿಸಿದೆ. ಇದರಿಂದ ಎಡಶಕ್ತಿಗಳ ಐಕ್ಯಕ್ಕೂ ದುಡಿಯುವ ಜನತೆಗೂ ಅಪಚಾರವಾಗುತ್ತಿದೆಯೆಂದು ಸಿ.ಪಿ.ಐ.ನ ಅಭಿಮತ.

ಮೊದಲನೆಯದಾಗಿ ಸರ್ವಾಧಿಕಾರದ ವಿರುದ್ಧ ವಿಶಾಲ ತಳಹದಿಯ ರಂಗ ನಿರ್ಮಾಣ ಮಾಡುವುದೆಂದರೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಎಲ್ಲ ಪಕ್ಷಗಳ ಒಕ್ಕೂಟ ರಚಿಸುವುದೆಂಬ ಅರ್ಥ ಅಲ್ಲ. ಸಿ.ಪಿ.ಐ. ಇದನ್ನು ಬೇಕೆಂದೇ ಅಪಾರ್ಥ ಮಾಡಿಕೊಂಡು ಗೊಂದಲವುಂಟುಮಾಡುತ್ತಿದೆ. ಎರಡನೆಯದಾಗಿ ಜಲಂಧರ್ ಕಾಂಗ್ರೆಸ್‌ನ ರಾಜಕೀಯ ನಿರ್ಣಯವನ್ನು ಮತ್ತೊಮ್ಮೆ ಅಗೆದು ತೆಗೆಯುವ ಪ್ರಶ್ನೆಯೂ ಇಲ್ಲ; ಯಾಕೆಂದರೆ ಅದನ್ನು ಯಾರೂ ಮಣ್ಣಿನಡಿ ಹೂತಿಟ್ಟಿರಲಿಲ್ಲ. ಸಿ. ಪಿ. ಐ. (ಎಂ) ವಿಷಮ ಪರಿಸ್ಥಿಯ ವಿರುದ್ಧ ನಡೆದ ಹೋರಾಟಕ್ಕೆ ಬೆಂಬಲ ನೀಡಿತ್ತು. ಈ ಹೋರಾಟದಲ್ಲಿ ಬೂರ್ಶ್ವಾ ವಿರೋಧ ಪಕ್ಷಗಳು ಸೇರಿದ್ದವೆಂಬುದು ನಮಗೆ ಗೊತ್ತಿರದ ವಿಷಯ ಅಲ್ಲ. ಈ ಹೋರಾಟಕ್ಕೆ ನೀಡಿದ ಬೆಂಬಲವೆಂದರೆ ಜನಸಂಘ ಅಥವಾ ಅಂತಹುದೇ ಇನ್ನಿತರ ಪಕ್ಷಗಳಿಗೆ ನೀಡಿದ ಬೆಂಬಲ ಅಲ್ಲ; ಅದು ತುರ್ತುಪರಿಸ್ಥಿತಿಯ ಕರಾಳ ಆಡಳಿತೆಯನ್ನು ಕೊನೆಗಾಣಿಸಿ ಸಾಂಸದಿಕ ಪ್ರಜಾಸತ್ತೆಯನ್ನು ಮರಳಿ ಸ್ಥಾಪಿಸಲು ನಡೆಸಿದ ಹೋರಾಟಕ್ಕೆ ನೀಡಲಾದ ಬೆಂಬಲ. ಸಿ. ಪಿ. ಐ. (ಎಂ) ತನ್ನ ಈ ರಾಜಕೀಯ ನಿಲುವೆಯ ಕುರಿತು ಹೆಮ್ಮೆತಾಳಿದೆ. ಈ ಬಗ್ಗೆ ಪಶ್ಚಾತ್ತಾಪಪಡಬೇಕಾದುದಂತೂ ಏನೂ ಇಲ್ಲ.

ಎಡ ಪ್ರಜಾಸತ್ತಾತ್ಮಕರಂಗ ಮತ್ತು ಸರ್ವಾಧಿಕಾರದ ವಿರುದ್ಧ ವಿಶಾಲ ತಳಹದಿಯರಂಗ ಇವೆರಡಕ್ಕೂ ಪ್ರತ್ಯೇಕವಾದ ಮತ್ತು ನಿರ್ದಿಷ್ಟ ಉದ್ದೇಶಗಳಿವೆ. ಸಿ. ಪಿ. ಐ. (ಎಂ)ಗೆ ಈ ವಿಷಯದಲ್ಲಿ ಯಾವುದೇ ಗೊಂದಲ ಇಲ್ಲ. ಸಾಂಸದಿಕ ಪ್ರಜಾಸತ್ತೆಯನ್ನಾದರೂ ಉಳಿಸಿಕೊಳ್ಳಬಯಸುವ ರಾಜಕೀಯ ಪಕ್ಷಗಳು ಎಡ ಪ್ರಜಾಸತ್ತಾತ್ಮಕರಂಗದ ಬೆಂಬಲಿಗರಾಗಲೇಬೇಕೆಂದೇನೂ ಇಲ್ಲವಲ್ಲ. ಎಡ ಪ್ರಜಾಸತ್ತಾತ್ಮಕರಂಗದ ಬೆಂಬಲಿಗರಾಗಿರದ ಮಾತ್ರಕ್ಕೆ ಅಥವಾ ಬಂಡವಾಳಶಾಹಿ ಭೂಮಾಲಕವರ್ಗದ ಆಳ್ವಿಕೆಗೆ ಬದಲಿಯಾಗಿ ದುಡಿಯುವ ಜನತೆಯ ಆಳ್ವಿಕೆಯನ್ನು ಸ್ಥಾಪಿಸಲು ಸಿದ್ಧವಾಗಿರದ ಮಾತ್ರಕ್ಕೆ ಅಂಥವರು ಯಾರೂ ಸಾಂಸದಿಕ ಪ್ರಜಾಸತ್ತೆಯ ಉಳಿವಿಗಾಗಿ ಅಥವಾ ಸರ್ವಾಧಿಕಾರದ ವಿರೋಧವಾಗಿ ನಡೆಯುವ ಹೋರಾಟದಲ್ಲಿ ಸೇರಲೇಬಾರದೆಂದು ಸಿ. ಪಿ. ಐ.ನ ಅಭಿಮತವೇ? ಎಡ ಪ್ರಜಾಸತ್ತಾತ್ಮಕರಂಗ ಮತ್ತು ವಿಶಾಲ ತಳಹದಿಯ ಸರ್ವಾಧಿಕಾರ ವಿರೋಧಿ ರಂಗ ಇವೆರಡರ ನಡುವೆ ವೈರುದ್ಧ್ಯವಿದೆಯೆಂದೂ ನಮಗೆ ಅನಿಸುತ್ತಿಲ್ಲ. ಅವೆರಡೂ ಒಂದಕ್ಕೊಂದು ಪೂರಕವಾಗಿ, ಸಹಕಾರಿಯಾಗಿರುತ್ತವೆಂದೇ ನಮ್ಮ ತಿಳುವಳಿಕೆ. ಸಾಂಸದಿಕ ಪ್ರಜಾಸತ್ತೆಯ ರಕ್ಷಣೆಗಾಗಿ ಮತ್ತು ಸರ್ವಾಧಿಕಾರದ ಅಳಿವಿಗಾಗಿ ನಡೆಯುವ ಹೋರಾಟವು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆ ಹಾಗೂ ಅವುಗಳ ಐಕ್ಯಕ್ಕೆ ಸಹಾಯಮಾಡಬಲ್ಲುದು. ಹಾಗೆಯೇ ಸರ್ವಾಧಿಕಾರದ ವಿರುದ್ಧ ನಡೆಯುವ ಹೋರಾಟವನ್ನು ಎಡ ಪ್ರಜಾಪ್ರಭುತ್ವ ಶಕ್ತಿಗಳು ಬಲಪಡಿಸುತ್ತವೆ. ಹಾಗಾಗಿ ಈ ಎರಡೂ ರಂಗಗಳ ನಡುವಿನ ವ್ಯತ್ಯಾಸವನ್ನು ಅವಗಣಿಸುವುದಾಗಲೀ ಅಥವಾ ಅವೆರಡರ ಮಧ್ಯೆ ಚೈನಾ ಗೋಡೆಯೊಂದನ್ನು ನಿರ್ಮಿಸಬಹುದಾಗಲೀ ರಾಜಕೀಯ ಪ್ರಬುದ್ಧತೆಯ ಲಕ್ಷಣ ಅಲ್ಲ.

ಬಿ.ಜೆ.ಪಿ.ಯನ್ನು ಹತ್ತಿರ ಸೇರಿಸಿಕೊಳ್ಳಲೇಕೂಡದೆಂದು ಸಿ.ಪಿ.ಐ. ಹೇಳುತ್ತಿದೆ. ಅದು ಏಕಸ್ವಾಮ್ಯವಾದಿಗಳ, ದೊಡ್ಡ ವ್ಯಾಪಾರಿಗಳ ಮತ್ತು ಭೂಮಾಲಕರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಪಕ್ಷವೆಂದೂ ಹೇಳಲಾಗಿದೆ. ಬಿ.ಜೆ.ಪಿ.ಯ ವರ್ಗಸ್ವರೂಪ, ಮತ್ತು ಅದು ಕೋಮುವಾದವನ್ನು ಬಹಿರಂಗವಾಗಿ ಪ್ರತಿಪಾದಿಸುತ್ತಿರುವುದನ್ನು ಬಿಟ್ಟರೆ ಇತರ ಬೂರ್ಶ್ವಾ ಪಕ್ಷಗಳಿಗಿಂತ ಅದು ಮೂಲಭೂತವಾಗಿ ಬೇರೆಯಾಗಿದೆಯೇ ಎನ್ನುವ ಚರ್ಚೆಯನ್ನು ಸದ್ಯ ಒತ್ತಟ್ಟಿಗಿರಿಸೋಣ. ಇದೀಗ ಲೋಕಸಭೆಯಲ್ಲೂ, ರಾಜ್ಯಸಭೆಯಲ್ಲೂ ಬಿ.ಜೆ.ಪಿ.ಯನ್ನು ಒಳಗೊಂಡಂತೆ ಎಲ್ಲ ವಿರೋಧ ಪಕ್ಷಗಳೂ ತಮ್ಮ ಸಾಂಸದಿಕ ಚಟುವಟಿಕೆಯನ್ನು ಪರಸ್ಪರ ಸಮನ್ವಯಗೊಳಿಸುತ್ತಿವೆ. ಈ ಬಗ್ಗೆ ಸಿ.ಪಿ.ಐ.ಗೆ ಅಭ್ಯಂತರವೇನೂ ಇಲ್ಲ. ಅಷ್ಟೇ ಅಲ್ಲ ಅದೂ ಇತರ ಪಕ್ಷಗಳೊಂದಿಗೆ ಸಹಕರಿಸುತ್ತಿರುವುದನ್ನೂ ಕಾಣಬಹುದು. ಟ್ರೇಡ್ ಯೂನಿಯನ್ ರಂಗದಲ್ಲಿ ಬಿ. ಜೆ. ಪಿ.ಯ ಕಾರ್ಮಿಕ ಸಂಘಟನೆಯಾಗಿರುವ ಬಿ.ಎಂ.ಎಸ್.ನ ಜೊತೆಗೆ ಎ.ಐ.ಟಿ.ಯು.ಸಿ. ಮತ್ತು ಸಿ.ಐ.ಟಿ.ಯು.ಗಳನ್ನೊಳಗೊಂಡು ಎಲ್ಲ ಕಾರ್ಮಿಕ ಸಂಘಟನೆಗಳೂ ಸಂಯುಕ್ತ ಕಾರ್ಯಾಚರಣೆ ನಡೆಸುತ್ತಿವೆ. ವಿದ್ಯಾರ್ಥಿ ಸಮುದಾಯದ ನಡುವೆ ಬಿ.ಜೆ.ಪಿ.ಯ ಸಂಘಟನೆಗಳಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ವಿದ್ಯಾರ್ಥಿ ಮೋರ್ಚಾಗಳು ಎಸ್.ಎಫ್.ಐ. ಹಾಗೂ ಎ.ಐ.ಎಸ್.ಎಫ್.ಗಳೊಡನೆ ಸಂಯುಕ್ತವಾಗಿ ಚಳುವಳಿ ನಡೆಸುತ್ತಿರುವುದೂ ನಿಜ. ಹಾಗಿರು

(6ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

-ಎನ್ಕೆ

ಸಹಕಾರಿ ಖಾತೆಯ ಸೊಸೈಟಿ-ಬ್ಯಾಂಕುಗಳ ಚುನಾವಣೆ ಮುಂದಕ್ಕೆ

ಸಹಕಾರಿ ಕಾಯಿದೆಗನುಸಾರ ರಿಜಿಸ್ಟರಾದ ಸೊಸೈಟಿ-ಬ್ಯಾಂಕ್ ಮತ್ತಿನ್ನಿತರ ಸಂಸ್ಥೆಗಳ ಚುನಾವಣೆ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಕೊನೆಯೊಳಗಾಗಿ ಮುಕ್ತಾಯಗೊಳಿಸಬೇಕಾಗುತ್ತದೆ. ಆ ನಿಯಮದಂತೆ ರಾಜ್ಯದ ಸೊಸೈಟಿ, ಬ್ಯಾಂಕ್, ನೂಲಿನ ಗಿರಣಿ ಮತ್ತಿನ್ನಿತರ ಸಂಸ್ಥೆಗಳು ತಮ್ಮ ವಾರ್ಷಿಕ ವರದಿ, ಲೆಕ್ಕಪತ್ರಗಳನ್ನೆಲ್ಲ ಛಾಪಿಸಿ ಚುನಾವಣೆಗೆ ತಯಾರಿ ನಡೆಸುತ್ತಿರುವಾಗಲೇ, ಸಹಕಾರಿ ಸಚಿವ ಶ್ರೀಕಂಠಯ್ಯನವರು ಈ ಚುನಾವಣೆಗಳನ್ನು ಡಿಸೆಂಬರ್ ಕೊನೆಯವರೆಗೆ ಮೂರು ತಿಂಗಳು ಮುಂದೂಡಿದ್ದಾಗಿ ಸಾರಿದ್ದಾರೆ. ಈಗಿರುವ ಸಹಕಾರಿ ಸಂಘಗಳ ಕಾನೂನಿಗೆ ತಿದ್ದುಪಡಿ ಸೂಚಿಸಲು ಕೆ.ಎಚ್. ಪಾಟೀಲರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಎರಡು ತಿಂಗಳ ಹಿಂದೆ ನೇಮಿಸಿದ್ದು, ಸಹಕಾರಿ ಚಳುವಳಿಯಲ್ಲಿ ಕ್ರಾಂತಿಕಾರೀ ಬದಲಾವಣೆಗಳನ್ನು ಈ ಸಮಿತಿ ಸೂಚಿಸುತ್ತದೆಂದೂ, ಆ ಸೂಚನೆಗಳನ್ನು ಅಳವಡಿಸಿಕೊಂಡ ಹೊಸ ಕ್ಯಾದೆ ಪಾಸು ಮಾಡಿದ ನಂತರ ಚುನಾವಣೆ ನಡೆಸಲಾಗುವುದೆಂದೂ ಮಂತ್ರಿಯವರ ಹೇಳಿಕೆ.

ಸರಕಾರದ ಈ ನಿರ್ಣಯ ಜನರಲ್ಲಿ ಸಂಶಯವನ್ನುಂಟುಮಾಡಿದೆ. ಸಹಕಾರಿ ಸಂಘಗಳೆಲ್ಲ ಈಗಾಗಲೇ ತಮ್ಮ ವಾರ್ಷಿಕ ಲೆಕ್ಕಪತ್ರ, ವರದಿಗಳನ್ನೆಲ್ಲ ಛಾಪಿಸಿವೆ. ಸರ್ವಸಾಧಾರಣ ಸಭೆಯ ನೋಟೀಸುಗಳನ್ನೂ ಕಳುಹಿಸಲಾಗಿದೆ. ಚುನಾವಣೆ ಮುಂದೂಡಿದ್ದರಿಂದ ಇವುಗಳಿಗೆಲ್ಲ ವಿನಾ ಕಾರಣ ಹಣ ಖರ್ಚಾದಂತಾಯಿತು.

ಕೆ. ಎಚ್. ಪಾಟೀಲ ಕಮಿಟಿಯು ವರದಿ ಸಲ್ಲಿಸಿಲ್ಲ. ಯಾವಾಗ ಸಲ್ಲಿಸುತ್ತಾರೆಂದೂ ತಿಳಿದಿಲ್ಲ. ಕಮಿಟಿಯ ಶಿಫಾರಸು ಬಂದನಂತರ ಸರಕಾರ ಅದನ್ನು ವಿಚಾರ ಮಾಡಬೇಕು, ವಿಧಾನಸಭೆಯಲ್ಲಿ ಪಾಸಾಗಬೇಕು. ಸಹಕಾರಿ ಸಂಘಗಳ ಕಾನೂನಿನಲ್ಲಿ ಬದಲಾವಣೆಯಾಗಬೇಕು. ಮೂರು ತಿಂಗಳೊಳಗೆ ಈ ಕೆಲಸ ಮುಗಿಯುತ್ತದೆಂದು ಯಾರೂ ನಂಬುವುದಿಲ್ಲ. ಹಾಗಾದರೆ ಚುನಾವಣೆ ಮುಂದೂಡಲು ಕಾರಣವೇನು? ಇಂದಿರಾ ಕಾಂಗ್ರೆಸ್ ಪಕ್ಷದ ಹಿತಾಸಕ್ತಿಗಳ ಹಿತಸಾಧನೆಯ ಸಲುವಾಗಿ ಈ ನಿರ್ಣಯ ಕೈಗೊಳ್ಳಲಾಗಿದೆಯಲ್ಲದೆ ಜನರ ಹಿತಕ್ಕಾಗಿಯಲ್ಲ.

ರಾಜ್ಯದ ಕಾರ್ಪೊರೇಷನ್, ಹಲವಾರು ನಗರಸಭೆಗಳ ಚುನಾವಣೆ ಕಳೆದ 15-20 ವರ್ಷಗಳಿಂದಲೂ ಮುಂದೂಡಲ್ಪಡುತ್ತಿದೆ. ಮಂತ್ರಿಗಳು ವಿಧಾನಸಭೆಯಲ್ಲಿ ಧಾರಾಳವಾಗಿ ಆಶ್ವಾಸನೆಗಳ ಸುರಿಮಳೆಗರೆಯುತ್ತಾರೆ. ನವೆಂಬರಿನಲ್ಲಿ ಚುನಾವಣೆ ಮಾಡಿಯೇ ತೀರುತ್ತೇವೆಂದು. ಆದರೆ ಚುನಾವಣೆ ನಡೆಸಲ್ಪಡುವ "ನವೆಂಬರ್" ಮಾತ್ರ ಕಳೆದ 15 ವರ್ಷಗಳಿಂದಲೂ ಬರುತ್ತಲೇ ಇಲ್ಲ. ಹಾಗೆಯೇ ಈಗ 3 ತಿಂಗಳು ಮುಂದೂಡಲ್ಪಟ್ಟ ಸಹಕಾರಿ ಸಂಘಗಳ ಚುನಾವಣೆಯಲ್ಲೂ ಎಷ್ಟು 3 ತಿಂಗಳುಗಳನ್ನು ದಾಟಬೇಕೋ ನೋಡಬೇಕಾಗಿದೆ. ಗುಂಡೂರಾಯರ ಪ್ರಜಾಪ್ರಭುತ್ವದ ವೈಖರಿಯೇ ಇದು. ಸಹಕಾರಿ ಸಂಘಗಳ ಚುನಾವಣೆಗೂ ಸಂಚಕಾರವೇ!

ಮಂತ್ರಿಮಂಡಲ ಸಭೆಯ ವೈಖರಿ

"ನನ್ನ ಸರ್ಕಾರ ಬಂಡೆಯಂತಹ ಸರಕಾರ. ಯಾರೂ ಅಲ್ಲಾಡಿಸಲಾಗದ ಸರಕಾರ ನನ್ನದು. ಈ ಸರಕಾರ ಯಾರಿಗೂ ಹೆದರುವುದಿಲ್ಲ". ಬೆಳಗಾವಿಯಲ್ಲಿ ಪಾರ್ಟಿ ಕಾರ್ಯಕರ್ತರ ಸಭೆಯಲ್ಲಿ ಹಾರಿಸಿದ ಗುಂಡೂರಾಯರ ಬಂಡೆಕಲ್ಲಿನ ಗುಂಡುಗಳಿವು.

ಮುನಸಿಪಲ್, ಕಾರ್ಪೊರೇಷನ್, ನಗರಸಭೆಗಳ ಚುನಾವಣೆಯಾಗಿ ಹದಿನೈದು ವರ್ಷಗಳಾದವು. ಚುನಾವಣೆ ಮಾಡಲಾಗುವುದೆಂಬ ಆಶ್ವಾಸನೆಗಳ ಗುಂಡು ಪ್ರತಿಸಲವೂ ವಿಧಾನಸಭೆಯಲ್ಲಿ ಹಾರಿಸಲಾಗುತ್ತಿದೆ. ಇಂದಿಗೂ ಅವು ಗುರಿಮುಟ್ಟಿಲ್ಲ. ಈಗ ಸೊಸೈಟಿ ಕಾಯಿದೆಯಲ್ಲಿ ಹಿಂದುಳಿದವರಿಗೆ ನ್ಯಾಯ ಕೊಡಿಸಲು, ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವಂಥ ತಿದ್ದುಪಡಿ ಮಾಡುವ ಸಲುವಾಗಿ ಸೆಪ್ಟೆಂಬರ್ ತಿಂಗಳಲ್ಲಿ ಜರುಗಬೇಕಾಗಿದ್ದ ಸೊಸೈಟಿ ಕ್ಯಾದೆಯ ಅಂಕಿತದೊಳಗೆ ಬರುವ ಎಲ್ಲ ಸಂಸ್ಥೆಗಳ ಚುನಾವಣೆ ಮುಂದೂಡಲಾಗಿದೆ. ಯಾರಿಗೂ ಹೆದರದ ಈ ಸರಕಾರ ಮತದಾರರಿಗಷ್ಟೆ ಹೆದರುವಂತೆ ಕಂಡುಬರುತ್ತಿದೆ. ಜನರ ಗುಂಡಿಗೆ ಹೆದರಿದೆ ಗುಂಡೂರಾವ್ ಸರಕಾರವೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ಸಾಕ್ಷಿಬೇಕೇ?

ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ಸರಕಾರ ಪ. ಬಂಗಾಲದಲ್ಲಿ ಕಾಂಗ್ರೆಸ್ ಆಳ್ವಿಕೆಯಲ್ಲಿ 20 ವರ್ಷ ನಡೆಸಲಾರದ ಗ್ರಾಮ ಪಂಚಾಯತಿ, ನಗರಸಭೆ, ಕಾರ್ಪೊರೇಷನ್ ಚುನಾವಣೆಗಳನ್ನು ನಡೆಸಿ ಅಧಿಕಾರ ವಿಕೇಂದ್ರೀಕರಣಗೊಳಿಸಿದೆ. ಗುಂಡೆದೆಯ ಗುಂಡೂರಾಯರ ಸರಕಾರಕ್ಕೆ ಅಂಥ ಧೈರ್ಯವೆಲ್ಲಿದೆ!

ಈ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ನಡೆದ ಮಂತ್ರಿಮಂಡಲದ ಸಭೆ ನಡೆದ ರೀತಿ, ನಿರ್ಣಯಗಳು ಹಾಗೂ ಅದಕ್ಕಾಗಿ ಮಾಡಲ್ಪಟ್ಟ ಪ್ರಚಾರಗಳನ್ನೆಲ್ಲ ಒಳನೋಟದಿಂದ ವೀಕ್ಷಿಸಿದರೆ "ವಿಧಾನಸಭಾ ಚುನಾವಣೆ ಬಂತು. ಅದರ ತಯ್ಯಾರಿಯಲ್ಲಿದ್ದೇವೆ" ಎಂಬ ಗುಟ್ಟು ಬಯಲಾಗುತ್ತಿದೆ. ಡಿಸೆಂಬರ್ ಕೊನೆಯೊಳಗಾಗಿ ರಾಜ್ಯದ 5 ಕಡೆಗಳಲ್ಲಿ ಮಂತ್ರಿಮಂಡಲದ ಸಭೆಗಳು, ಆ ಸಭೆಗಳಿಗಾಗಿ ಪ್ರಚಾರ, ಪಾರ್ಟಿ ಕಾರ್ಯಕರ್ತರ ಸಭೆಗಳು, ಆಶ್ವಾಸನೆಗಳು.

•

ಬೆಳಗಾವಿಯಲ್ಲಿ ಮಂತ್ರಿಮಂಡಲದ ಸಭೆ ನಡೆದದ್ದು ಬರೇ 2 ಗಂಟೆ. 9-30ರಿಂದ 11-30. 11-30ರಿಂದ 12-30ರವರೆಗೆ ಪತ್ರಿಕಾ ಪ್ರತಿನಿಧಿಗಳಿಗೆ ನಿರ್ಣಯಗಳ ವಿವರಣೆ. ಬೆಳಗಾವಿ, ಬಿಜಾಪುರ, ಧಾರವಾಡ, ಕಾರವಾರ ಜಿಲ್ಲೆಗಳ ಪ್ರಮುಖ ಸಮಸ್ಯೆಗಳೇನೆಂಬುದನ್ನು ಅಧಿಕಾರಿಗಳ ಮಟ್ಟದಲ್ಲೇ ಮುಂಚಿತವಾಗಿಯೇ ನಿರ್ಣಯಿಸಲಾಗಿತ್ತು. ಸಚಿವಸಂಪುಟದ ಒಪ್ಪಿಗೆ ಅವಶ್ಯವಿರುವ ವಿಷಯಗಳಷ್ಟೇ ನಾಟಕೀಯವಾಗಿ ಸಭೆ ಮುಂದೆ ಬಂದಿವೆ. ಯಾಕೆಂದರೆ 11-30 ಸಭೆ ಮುಗಿಯಿತು. ಕೂಡಲೇ ಪತ್ರಿಕಾ ಪ್ರತಿನಿಧಿಗಳ ಸಭೆ. ಆ ಸಭೆಯಲ್ಲಿ ಮಂತ್ರಿಮಂಡಲದ ಸಭೆಯ ನಿರ್ಣಯಗಳನ್ನು ಸ್ಯಾಕ್ಲೋ ಮಾಡಿ ಹಂಚಲಾಯಿತು. ಇದರರ್ಥವೇನು? ಅಧಿಕಾರಿಗಳೇ ಎಲ್ಲ ನಿರ್ಣಯ ಕೈಕೊಂಡು ಅದನ್ನು ಸ್ಯಾಕ್ಲೋ ಮಾಡಿದ್ದರು. ಮಂತ್ರಿಮಂಡಲದ ಸಭೆಯಲ್ಲಿ ಅವುಗಳನ್ನು ಓದಿದರು. ಮಂತ್ರಿಗಳು "ಯೇ" ಎಂದು ಕೈಯೆತ್ತಿದ್ದರು. ಪತ್ರಿಕೆಗಳಲ್ಲಿ ಆಶ್ವಾಸನೆಗಳು ದಪ್ಪಕ್ಷರಗಳಲ್ಲಿ ಕಂಡವು. ಚುನಾವಣೆ ಪ್ರಚಾರ ಪ್ರಾರಂಭವಾಯಿತು. ಆದರೆ ಜನರ ನಂಬಿಕೆ ಕಡಿಮೆಯಾಯಿತು. ಪತ್ರಿಕಾ ಪರಿಷತ್ತಿನಲ್ಲಿ ನಾನು, ಜನಜೀವಾಳ ಸಂಪಾದಕರು, ಕನ್ನಡಮ್ಮ ಸಂಪಾದಕರೆಲ್ಲ ಹಲವಾರು ಪ್ರಶ್ನೆ ಕೇಳಿದಾಗ ಹಾರಿಕೆ ಉತ್ತರ ಕೊಡಲಾಯಿತು. "ಜನತಾ ಮನೆಗಳೆಲ್ಲ ಬೀಳುತ್ತಿವೆ" "ಮನೆಗಳು ಬಿದ್ದರೆ ಮತ್ತೆ ಕಟ್ಟಿಸುತ್ತೇವೆ" "ಇದರಿಂದ ಹಾನಿಯಾಗುತ್ತದಲ್ಲ, ಇದನ್ನು ತಪ್ಪಿಸಬಹುದಲ್ಲ" "ಕ್ರಮ ಕೈಗೊಳ್ಳುತ್ತೇವೆ". "ಕಾಲುವೆ ಕೆಲಸ ಪುನಃ ಶುರುಮಾಡಬೇಕೆಂದು ಗೋಕಾಕ ತಾಲ್ಲೂಕಿನ ರೈತರು ಮತಪ್ರದರ್ಶನ ಮಾಡಿದ್ದಾರಲ್ಲ. ಯಾವಾಗ ಕೆಲಸ ಪ್ರಾರಂಭಿಸುತ್ತೀರಿ" "ಕೂಡಲೇ ಪ್ರಾರಂಭಿಸುತ್ತೇವೆ" "ಯಾವ ತಾರೀಖಿನಿಂದ" "ಕೂಡಲೇ". "ತಾರೀಕು ತಿಳಿಸಿರಿ" "ಕೂಡಲೇ".

ಅನಿರೀಕ್ಷಿತ ಮಳೆ ಸರಕಾರದ ವಿಫಲತೆ

ಕಾಯಂ ಅನಾವೃಷ್ಟಿ ಪ್ರದೇಶವೆನಿಸಿಕೊಂಡಿದ್ದ ಕೋಲಾರ ಮತ್ತಿನ್ನಿತಹ ಜಿಲ್ಲೆಗಳಲ್ಲಿ ಅನಿರೀಕ್ಷಿತ ಮಳೆ ಜನಜೀವನವನ್ನು ಅಲ್ಲೋಲಕಲ್ಲೋಲಗೊಳಿಸಿದೆ. ಕೋಲಾರ ಜಿಲ್ಲೆಯೊಂದರಲ್ಲೇ ಒಂದುನೂರ ಇಪ್ಪತ್ತಕ್ಕೂ ಹೆಚ್ಚು ಕೆರೆಗಳು ಒಡೆದುಹೋಗಿ ಸಾವಿರಾರು ಎಕರೆ ಭೂಮಿಯ ಬೆಳೆ ಹಾನಿಯಾಗಿದೆ. ಮನೆಗಳು ನೆಲಸಮವಾಗಿವೆ. ಜನರೂ ಅಸುನೀಗಿದ್ದಾರೆ.

ಬ್ರಿಟಿಷರ ಕಾಲದಲ್ಲಿ ಹಾಕಲ್ಪಟ್ಟ ರೇಲ್ವೆ ಕಂಬಿಗಳೆಲ್ಲ ಶಕ್ತಿಹೀನವಾಗಿರುವುದರಿಂದ ಮೇಲಿಂದ ಮೇಲೆ ರೇಲ್ವೆ ಅಪಘಾತಗಳಾಗುತ್ತಿರುವುದರಿಂದ ರೇಲ್ವೆ ಕಂಬಿಗಳನ್ನು ಆಧುನೀಕರಿಸಬೇಕೆಂಬ ಬೇಡಿಕೆಗಳು ಬರುತ್ತಿವೆ. ಮಳೆಯೇ ಬಾರದಿರುವಾಗ ಕೆರೆಗಳ ರಿಪೇರಿ ಕುರಿತು ಚಿಂತನೆ ಮಾಡುವುದು ಸರಿಯಲ್ಲೆಂದು ಹೇಳುವವರೂ ಇದ್ದಾರೆ. ಇಂಥ ವಿಚಾರದಿಂದಾಗಿಯೇ ಕೋಲಾರ ಜಿಲ್ಲೆಯಂಥ ಪ್ರದೇಶದಲ್ಲಿ ನೂರಾರು ಕೆರೆಗಳನ್ನು ಕಳೆದುಕೊಳ್ಳುವಂತಾಯಿತು. ಮಳೆ ಇರಲಿ, ಇಲ್ಲದಿರಲಿ ಕಟ್ಟಿದ ಕೆರೆಗಳ ಸಂರಕ್ಷಣೆ ಮಾಡಲೇಬೇಕೆಂಬ ವಿಚಾರ ಇರುವುದು ಅತ್ಯಗತ್ಯ. ಆರ್ಥಿಕವಾಗಿ ದಿವಾಳಿಖೋರ ಸರಕಾರ ಅಭಿವೃದ್ಧಿ ಕೆಲಸಗಳೆಡೆ ಗಮನಹರಿಸದಿದ್ದಾಗ ಮಳೆನೀರಲ್ಲಿ ಕೊಚ್ಚಿಹೋದ ಕೆರೆಗಳನ್ನು ಮತ್ತೊಮ್ಮೆ ನಿರ್ಮಿಸಬೇಕಾದರೆ ಎಷ್ಟು ವರ್ಷ ಹಿಡಿದೀತು? ಹೋದ ವರ್ಷ ಬಿಜಾಪುರದಲ್ಲಿ ಒಡೆದ ಕೆರೆಯನ್ನು ಇನ್ನೂ ಕಟ್ಟಿಲ್ಲ. ಕೋಲಾರ ಜಿಲ್ಲೆಯಲ್ಲಿ ನೂರಾರು ಕೆರೆಗಳು ಒಡೆದಿರುವುದರಿಂದ ಆ ಜಿಲ್ಲೆಯ ಭೂಮಿಗೂ, ದನಕರುಗಳಿಗೂ ಬೇಸಿಗೆಯಲ್ಲಿ ನೀರು ಸಿಗುವುದೇ ಅಸಾಧ್ಯ. ಆದ್ದರಿಂದ ತ್ವರಿತ ಕೆಲಸ ಕೈಗೊಳ್ಳುವಂತೆ ಚಳುವಳಿ ನಡೆಯಲಿ.

ಅತಿವೃಷ್ಟಿಗೆ ತುತ್ತಾಗಿ ಅಪಾರ ಹಾನಿಗೀಡಾದ ಕೋಲಾರ ಜಿಲ್ಲೆಯಲ್ಲಿ ಕೈಕೊಂಡಿರುವ ಪರಿಹಾರ ಕಾರ್ಯ ನೋಡಿದರೆ ಸರಕಾರಕ್ಕೆ ಪರಿಸ್ಥಿತಿಯ ತೀವ್ರತೆಯೇ ಅರ್ಥವಾಗಿಲ್ಲೆಂದು ಕಂಡುಬರುತ್ತದೆಂದು ಸಂಸತ್ ಸದಸ್ಯ ಮತ್ತು ಭಾರತ ಕಾಂಗ್ರೆಸ್ ಸಮಿತಿಯ ಜಂಟೀಕಾರ್ಯದರ್ಶಿ ಜಿ. ವೈ. ಕೃಷ್ಣ ಆಪಾದಿಸಿದ್ದಾರೆ. ಅದೇ ಸಮಯದಲ್ಲಿ ಕಂದಾಯ ಕಮೀಷನರ್ ಆದಿರಾಜಯ್ಯನವರು ಲೋಕೋಪಯೋಗಿ ನೌಕರರನ್ನುದ್ದೇಶಿಸಿ ಮಾತಾಡುತ್ತ ಸರಕಾರಕ್ಕೆ ಹಣದ ಕೊರತೆಯಿಲ್ಲ; ಸರಿಯಾಗಿ ಕೆಲಸ ಮಾಡಿರೆಂದು ಆದೇಶವಿತ್ತಿದ್ದಾರೆ. ಆದರೆ ಅಪಾರ ಹಾನಿಯನ್ನು ತುಂಬಿಕೊಳ್ಳಲು ತ್ವರಿತಗತಿಯ ಕಾರ್ಯಕ್ರಮವೇನೆಂಬುದನ್ನು ಮಂತ್ರಿಮಂಡಲ ನಿರ್ಧರಿಸಿಲ್ಲ. ನೂರಾರು ಕೆರೆ ಒಡೆದು ಅಪಾರ ಹಾನಿಯಾದರೂ, ದನ, ಜನ, ಆಸ್ತಿ ನೀರುಪಾಲಾಗಿ ಉಪವಾಸಬಿದ್ದರೂ ಕೊನೆಗಳಿಗೆಯಲ್ಲಿ ಕೈಗೇ ಮತಬೀಳುತ್ತದೆಂಬ ಭರವಸೆ ಇರುವಾಗ, ಪರಿಹಾರ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳುವ ಅವಶ್ಯಕತೆಯಾದರೂ ಏನಿದೆಂಬ ಸಂಗತಿ ಗುಂಡೂರಾಯರಿಗೆ ಗೊತ್ತು. ಆದರೆ ಕಾಮಗಾರಿಗಳ ಹಣದ ಮೇಲೆ ಉಪಜೀವನ ನಡೆಸುವ ಕಾಂಗ್ರೆಸ್ ದಲ್ಲಾಳಿಗಳೂ, ರಾಜಕೀಯ ಏಜಂಟರ ಒತ್ತಾಯಕ್ಕೆ ರಾಯರು ಮಣಿಯಲೇಬೇಕು. ಪರಿಹಾರ ಕಾರ್ಯ ಪ್ರಾರಂಭವಾಗಲೇಬೇಕು. ಆದರೆ ಮುಕ್ತಾಯದ ದಿನಾಂಕ?

ನೆರೆ ಹಾವಳಿಯಿಂದ ಜನ ಕಂಗಾಲಾಗಿರುವಾಗ ಶ್ರೀನಿವಾಸಪುರ

(6ನೇ ಪುಟ ನೋಡಿ)

ಪೋಲಂಡ್ : ಬೆಳೆಯುತ್ತಿರುವ ಪ್ರತಿಕ್ರಾಂತಿಕಾರಿ ಅಪಾಯ

(3ನೇ ಪುಟದಿಂದ)

ಈ ಉದ್ದೇಶ ಈಗ ಗುಪ್ತವಾಗೇನೂ ಉಳಿದಿಲ್ಲ. ಕ್ಯಾಥೋಲಿಕ್ಕರ ಗುರು ಮತ್ತವನ ಶಿಷ್ಯ ವಾಲೇಸಾ ಸ್ವತಂತ್ರ ಪೋಲೆಂಡನ್ನು ಆಗಲೇ ಬೇಡಿದ್ದಾರೆ. ಈವರೆಗೆ ಮೌನದಿಂದಿದ್ದ ಈ ಚರ್ಚು ಈಗ ಸಾಲಿಡಾರಿಟಿಗೆ ಸಂಪೂರ್ಣ ಆಶೀರ್ವಾದ ನೀಡಿದೆಯಲ್ಲದೆ, ಪ್ರತಿಕ್ರಾಂತಿಕಾರಿಗಳಿಗೆ ಬಹಿರಂಗ ಬೆಂಬಲ ನೀಡಿದೆ. ಕ್ಯಾಥೋಲಿಕ್ಕರ ಗುರು ಸೆಪ್ಟೆಂಬರ್ 15ರಂದು ಒಂದು ಹೇಳಿಕೆ ಹೊರಡಿಸಿ ಸಾಲಿಡಾರಿಟಿಗೆ ಬೆಂಬಲ ನೀಡುವುದರೊಂದಿಗೆ "ಉತ್ಪಾದನಾ ಸಾಧನಗಳ ಖಾಸಗಿ ಒಡೆತನವನ್ನು ಸಾಮಾನ್ಯವಾಗಿ" ಎತ್ತಿ ಹಿಡಿದಿದ್ದಾನೆ. ಇದಕ್ಕೆ ಸರಿಹೊಂದುವಂತೆ ಸಾಲಿಡಾರಿಟಿ ತನ್ನ ಮೊದಲ ಅಧಿವೇಶನದಲ್ಲಿ ಪೋಲೆಂಡಿನ ಈಗಿನ ಪಾರ್ಲಿಮೆಂಟ್ ಜನತೆಯ ಪ್ರತಿನಿಧಿಯಲ್ಲ ಎಂದು ಘಂಟಾಘೋಷವಾಗಿ ಸಾರಿದೆ. "ಪ್ರಗತಿಪರ ಆರ್ಥಿಕ ದಿವಾಳಿ ಬರುವುದಾದರೂ ಸರಿ, ಪಕ್ಷದ ಹಿಡಿತವನ್ನು ಫ್ಯಾಕ್ಟರಿಗಳಲ್ಲಿ ಸಾಲಿಡಾರಿಟಿ ಮುರಿಯುತ್ತದೆ" ಎಂದು ನಿರ್ಣಯವನ್ನವರು ಪಾಸು ಮಾಡಿದ್ದಾರೆ. ಸ್ವಯಂ ಘೋಷಿತ ನಾಯಕನಾದ ವಾಲೇಸಾ ಸಮಾಜವಾದವನ್ನು ನಿರ್ನಾಮಮಾಡಿ ಬಂಡವಾಳವಾದವನ್ನು ಮರಳಿ ಹುಟ್ಟಿಸುವ ತನ್ನ ಆಶೆಯನ್ನು ಗುಪ್ತವಾಗೇನೂ ಇಟ್ಟಿಲ್ಲ. ಸೆಪ್ಟೆಂಬರ್ 12ರಂದು ಆತ ನೀಡಿದ ಹೇಳಿಕೆಯೊಂದರಲ್ಲಿ "ಬಂಡವಾಳವಾದವಾಗಲಿ ಅಥವಾ ಮತ್ತೇನಾದರೂ ಆಗಲಿ ನಮಗೆ ಸರಿಹೊಂದುವುದಿಲ್ಲ. ನಾವು ವಿಭಿನ್ನವಾದ ಒಂದು ಜನತೆ" ಎಂದು ಹೇಳಿದ್ದಾನೆ. ಈ "ಮತ್ತೇನಾದರು" ಎನ್ನುವುದು ಸಮಾಜವಾದವನ್ನೇ ಕುರಿತಾದದ್ದು ಎನ್ನುವುದು ಬುದ್ಧಿ ಸರಿಯಾಗಿರುವ ಎಲ್ಲರಿಗೂ ಅರಿವಾಗುವ ಅಂಶ. ಬಂಡವಾಳವಾದ ಸಮಾಜವಾದಗಳನ್ನುಳಿದು ಬೇರೆ ದಾರಿ ಯಾವುದೂ ಇಲ್ಲವೆಂದು ಬಂಡವಾಳಶಾಹಿಗಳೇ ಒಪ್ಪಿರುವಾಗ ಪ್ರತ್ಯೇಕವಾದದ್ದನ್ನು ಈತ ಏನು ಮಾಡಲು ಸಾಧ್ಯ? ಇಂಥ "ಪ್ರತ್ಯೇಕ" ವಾದಗಳ ಬಗ್ಗೆ ಜಗತ್ತಿನ ಮಾರ್ಕ್ಸ್‌ವಾದಿಗಳು ಬೇಕಷ್ಟು ಕೇಳಿದ್ದಾರೆ, ಜನತೆಗೆ ಇದರ ಸತ್ಯದ ಅರಿವು ಸ್ಪಷ್ಟವಾಗೇ ಇದೆ. ಸೆಪ್ಟೆಂಬರ್ 11ರಂದು ನೀಡಿದ ಮತ್ತೊಂದು ಹೇಳಿಕೆಯಲ್ಲಿ ವಾಲೇಸಾ "ನಮ್ಮ ಹಿರಿಯರು ಕನಸು ಮಾತ್ರ ಕಟ್ಟಲು ಸಾಧ್ಯವಿದ್ದ ಹೊಸ ಪೋಲಂಡನ್ನು ನಿರ್ಮಿಸುವ ಅವಕಾಶಹೊಂದಿದ್ದೇವೆ" ಎಂದಿದ್ದಾನೆ. ಯಾವುದು ಈ ಹೊಸ ಪೋಲಂಡ್? ಬಂಡವಾಳಶಾಹಿಯಾದ, ಯೂರೋಪಿನ ಶಾಂತಿಗೆ ಸತತ ಧಕ್ಕೆ ತರುವ, ಅಭದ್ರತೆಯನ್ನುಂಟುಮಾಡುವ ಪೋಲೆಂಡ್ ಎಂದು ಬೇರೆ ಹೇಳಬೇಕೇ!

ಇವರೆಲ್ಲ ಸಾಮ್ರಾಜ್ಯವಾದ ಕೊಂಡೊಗೆದ ಏಜೆಂಟರೆನ್ನಲು ಬೇರೆ ಪುರಾವೆ ಬೇಕೇ?

ಪೋಲೆಂಡಿನಲ್ಲಿ ಇವರು ನಡೆಸುತ್ತಿರುವುದು ಸಾಲದೆಂಬಂತೆ ಯೂರೋಪಿನ ಇತರ ಸಮಾಜವಾದಿ ರಾಷ್ಟ್ರಗಳ ಕಾರ್ಮಿಕರನ್ನೂ ಅಲ್ಲಿನ ಜನತೆಯ ಸರಕಾರಗಳ ವಿರುದ್ಧ ದಂಗೆ ಏಳುವಂತೆ ಈ ಜನ ಪ್ರಚೋದನೆ ನೀಡುತ್ತಿರುವರು. ಸಾಲಿಡಾರಿಟಿಯ ಮೊದಲ ಸಮ್ಮೇಳನ ಹೀಗೆ ಮಾಡುವಂತೆ ಒಂದು ಕರೆಯನ್ನೇ ನೀಡಿದೆ. ಜಾಗತಿಕ ಸಮಾಜವಾದಿ ವ್ಯವಸ್ಥೆಯ ವಿರುದ್ಧ, ಕಮ್ಯೂನಿಸ್ಟ್ ಚಳುವಳಿಯ ವಿರುದ್ಧ ಒಂದು ಮಹಾ ಷಡ್ಯಂತ್ರವನ್ನು ಬಹಿರಂಗವಾಗೇ ಈ ಜನ ಹೂಡುತ್ತಿದ್ದಾರೆ. ದುಃಸ್ಸಾಹಸದ ಪರಮಾವಧಿಯನ್ನು ಈ ಜನ ಈಗ ಮುಟ್ಟಿದ್ದಾರೆ. ಇದಕ್ಕೆ ಹೊಂದಿಕೊಂಡು ವಾಷಿಂಗ್ಟನ್ ಕೂಡಾ ರಷ್ಯಕ್ಕೆ ಎಚ್ಚರಿಕೆಗಳನ್ನು ನೀಡುತ್ತ ಬಂದಿದೆ. ಆಂತರಿಕ ಹಸ್ತಕ್ಷೇಪ ನಡೆಸಕೂಡದೆಂದು ಬೆದರಿಕೆಯನ್ನೊಡ್ಡುತ್ತಿದ್ದಾರೆ. ಅವರು ಪ್ರತಿಕ್ರಾಂತಿ ಮಾಡಿದರೆ ಕಾರ್ಮಿಕವರ್ಗದ ಹೆಸರಿನಲ್ಲೇ ಅವರ ಬೆನ್ನಿಗೆ ಚೂರಿ ಹಾಕಿದರೆ ಅದನ್ನು ತಡೆಗಟ್ಟಲು ಯಾರೂ ಸಹಾಯಮಾಡಬಾರದು, ಅಂಗೋಲದ ಮೇಲೆ ತಮ್ಮ ಬಂಟರು ದಾಳಿ ನಡೆಸಿದರೆ ಯಾರೂ ತುಟಿ ಬಿಚ್ಚಬಾರದು. ಅಂಥವರು ಇಂದು ಪೋಲೆಂಡಿನ ಕಾರ್ಮಿಕರ ಮೇಲೆ ವಿಪರೀತ ಕರುಣೆ ತೋರಿಸುತ್ತಿದ್ದಾರೆ. ಇವರೆದುರು ಸೋಲನ್ನೊಪ್ಪಲು ಸಾಧ್ಯವಿಲ್ಲ. ಸಿ.ಪಿ. ಎಸ್. ಯು.ನ 26ನೇ ಅಧಿವೇಶನದಲ್ಲಿ ಕಾಮ್ರೇಡ್ ಬ್ರೆಜ್ನೇವರು ಕಷ್ಟದ ಪರಿಸ್ಥಿತಿಯಲ್ಲಿ ಪೋಲೆಂಡಿನ ಸಂಗಾತಿಗಳನ್ನು ಕೈಬಿಡುವುದಿಲ್ಲ ಎಂದು ಸರಿಯಾಗೇ ಹೇಳಿದ್ದಾರೆ.

ತಡವಾಗಿ ಬಂದ ಸರಕಾರದ ಕ್ರಮ

ಇಷ್ಟೆಲ್ಲ ನಡೆಯುತ್ತಿರುವಾಗ, ಪ್ರತಿಕ್ರಾಂತಿ ಬಹಿರಂಗಕ್ಕೆ ಬಂದಾಗ, ಅವರ ಎಲ್ಲ ಬೇಡಿಕೆಗಳನ್ನೂ ಮನ್ನಿಸಿದ ತರುವಾಯ ತಡವಾಗಿಯಾದರೂ ಪೋಲೆಂಡಿನ ಸರಕಾರ ಈ ವಿಛಿದ್ರಕಾರಿಗಳನ್ನು ಹತ್ತಿಕ್ಕಲು ಮುಂದೆ ಬಂದಿರುವುದು ಹರ್ಷದಾಯಕವಾದದ್ದು.

ಲೇಖನವನ್ನು ಬರೆಯುತ್ತಿದ್ದಂತೇ ಕಾನೂನು ಪಾಲನೆಯನ್ನು ಸುಸ್ಥಿತಿಗೆ ತರಲು ಸೈನ್ಯವನ್ನು ಸರಕಾರ ಕೋರಿದ ವರದಿಗಳು ಬಂದಿವೆ. ಆದರೆ ಸಮಾಜವಾದದ ವೈರಿಗಳಿಗೆ ಸರಿಯಾದ ಶಿಕ್ಷೆಯಾಗಬೇಕು. ನಿಧಾನವಾಗಿ, ಸಾವಕಾಶವಾಗಿ, ಹಂತಹಂತವಾಗಿ ಪಕ್ಷದ ಹಾಗೂ ಸಮಾಜವಾದದ ವಿರುದ್ಧ ಹತೋಟಿ ಸ್ಥಾಪಿಸಲು ನಡೆಸುವ ಪ್ರತಿಕ್ರಾಂತಿಕಾರಿಗಳನ್ನು ಈಗಲಾದರೂ ಹಿಮ್ಮೆಟ್ಟಿಸಬೇಕು. "ಈಗಾಗಲೇ ರಾಷ್ಟ್ರೀಯ ಪ್ರಸಾರ ಮಾಧ್ಯಮಗಳ ಮೇಲೆ ಹಿಡಿತ ಸಾಧಿಸುವ ಸಾಲಿಡಾರಿಟಿ ದೇಶದ ಅರ್ಥವ್ಯವಸ್ಥೆ ಮತ್ತು ಸರಕಾರದ ಮೇಲೆ ಹಿಡಿತ ಸಾಧಿಸಲು ಹೋರಾಟ ಮತ್ತು ಸಂಧಾನದ ನೀತಿಯನ್ನು ಅನುಸರಿಸುತ್ತ ಬಂದಿದೆ. ಬೇರೆ ಸಮಾಜವಾದಿ ರಾಷ್ಟ್ರಗಳು ಸಹಾಯಕ್ಕೆ ಬರುವುದನ್ನು ತಪ್ಪಿಸಲು ಈ ನಿಧಾನದ ಮತ್ತು ಖಚಿತ ನೀತಿಯನ್ನು ಪೋಲೆಂಡಿನ ಪ್ರತಿಕ್ರಾಂತಿಕಾರಿಗಳು ಅನುಸರಿಸುತ್ತಿದ್ದಾರೆ". ಇದಕ್ಕೆ ತಕ್ಷಣ ತಡೆ ಹಾಕಬೇಕು. ಸಮಾಜವಾದೀ ಕಾನೂನನ್ನು ಬಳಸಿ ಅಪರಾಧಿಗಳನ್ನು ಕಟಕಟೆಗೆ ತರಬೇಕು. ಅಪರಾಧಿಗಳನ್ನು ಎಲ್ಲಕ್ಕೂ ಮೊದಲು ಸ್ಪಷ್ಟವಾಗಿ ಗುರುತಿಸಬೇಕು. ಪಕ್ಷದೊಳಗಿರುವ ಪರಿಷ್ಕರಣವಾದಿಗಳನ್ನು, ಲೆನಿನ್‌ವಾದಿ ಆರ್ಥಿಕ ನೀತಿಯಿಂದ ಪಕ್ಷವನ್ನು ದೂರ ಸರಿಸಿದವರನ್ನೂ ಪಕ್ಷದಿಂದ ಹೊರಹಾಕಬೇಕು. ದೈನಂದಿನ ವಸ್ತುಗಳ ಅಗತ್ಯವನ್ನೂ ಪೂರೈಸುವುದರೊಂದಿಗೆ ಬಂಡವಾಳ ವಿನಿಯೋಗವನ್ನು ಯೋಚಿಸಬೇಕು.

ಮಾರ್ಕ್ಸ್‌ವಾದಿ - ಲೆನಿನ್‌ವಾದಿ ನೀತಿಗೆ ಹಿಂದಿರುಗುವುದು, ಪೋಲೆಂಡಿನ ಪಕ್ಷದ ದೃಢತೆಯನ್ನು ವಿಸ್ತರಿಸುವುದು, ಐಕ್ಯದಿಂದ ಜಾಗತಿಕ ಕಮ್ಯುನಿಸ್ಟ್ ಚಳುವಳಿ ಪೋಲೆಂಡಿನ ಸಂಗಾತಿಗಳಿಗೆ ದೃಢವಾದ ಬೆಂಬಲ ನೀಡುವುದು-ಕಠಿಣ ಪರಿಸ್ಥಿತಿಯಿಂದ ಹೊರಹೋಗಲು ಇದೊಂದೇ ದಾರಿ. ಈ ದಿಶೆಯಲ್ಲಿ ನಮ್ಮ ಪಕ್ಷ ತನ್ನ ನೀತಿಯನ್ನು ದೃಢವಾಗಿ ಮಂಡಿಸಿದೆ: "ಮಾತು ಮತ್ತು ಕೃತಿಗಳಲ್ಲಿ ಸಮಾಜವಾದಿ ಪೋಲೆಂಡನ್ನು ಬೆಂಬಲಿಸಲು ನಾವು ಪ್ರತಿಜ್ಞೆಗೈಯುತ್ತೇವೆ. ಬಹಿರಂಗವಾದ ಅಥವಾ ಮುಸುಕಿನಲ್ಲಿರುವ, ದೇಶೀಯ ಅಥವಾ ವಿದೇಶೀಯ ಪ್ರತಿಕ್ರಾಂತಿಕಾರಿಗಳಿಗೆ ನಮ್ಮ ಪ್ರಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತೇವೆ".

—ರುದ್ರಪ್ಪ ಕಾಯಿ

ಸಹಕಾರಿ ಖಾತೆಯ ಸೊಸೈಟಿ-ಬ್ಯಾಂಕುಗಳ ಚುನಾವಣೆ ಮುಂದಕ್ಕೆ

(5ನೇ ಪುಟದಿಂದ)

ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಾಗಿ ಹಣ ಮಂಜೂರು ಮಾಡಲಾಗಿದೆಯಂತೆ. ಅಪಾರ ಮಳೆಯಾದ ನಂತರವೇ ಈ ಹಣ ಬಿಡುಗಡೆಯಾಗಿದೆಯಂತೆ. ಭ್ರಷ್ಟಾಚಾರ ವಿಶ್ವವ್ಯಾಪಿಯಾಗಿದೆಂದು ಇಂದಿರಾಗಾಂಧಿಯೇ ಸರ್ಟಿಫಿಕೇಟ್ ಕೊಟ್ಟನಂತರ, 125 ಕೋಟಿ ರೂಪಾಯಿ ಎತ್ತಿಹಾಕಿದ ಮಹಾರಾಷ್ಟ್ರದ ಮುಖ್ಯಮಂತ್ರಿಯು ರೋಮವನ್ನು ಕೆಣಕಲೂ ಪ್ರಧಾನಮಂತ್ರಿ ಹಿಂಜರಿಯುತ್ತಿರುವಾಗ, 7 ಸಾವಿರ ರೂಪಾಯಿ ಬರಗಾಲ ನಿವಾರಣೆಗೆ ಬಿಡುಗಡೆಮಾಡಿ ಪಾಲುಹಂಚಿಕೊಂಡರೆ ಶ್ರೀನಿವಾಸಪುರದ ಅಧಿಕಾರಿಗಳ ತಪ್ಪೇನು? ಇಮ್ಮಡಿ ಧೈರ್ಯದ ಮುಮ್ಮಡಿ ರಾಯುನಾಗಿ ಎದೆಯುಬ್ಬಿಸಿ ಮೆರೆದರೆ ತಪ್ಪೇ!

ನೀರಾವರಿ ನಾಲೆಗಳ ಕುರಿತು ಅಲಕ್ಷ್ಯ

ಹೊಸ ನೀರಾವರಿಗಳ ಕುರಿತು ಬಂಡವಾಳಶಾಹಿ ಸರಕಾರ ತನ್ನ ಅಲಕ್ಷ್ಯತನವನ್ನು ತೋರಿಸುತ್ತಿದೆ. ಹಾಗೆಯೇ ಭದ್ರಾ ಯೋಜನೆಯ ರಿಪೇರಿ ಕೆಲಸ ನನೆಗುದಿಗೆ ಬಿದ್ದಿದೆ. ಅದೇ ಸಮಯದಲ್ಲಿ ತುಂಗಭದ್ರಾ ಕಾಲುವೆಗಳ ಗತಿಹೀನತೆಯ ಕುರಿತು ಈ ಹಿಂದೆಯೇ ಐಕ್ಯರಂಗದಲ್ಲಿ ವರದಿ ಮಾಡಲಾಗಿತ್ತು. ಈಗ ಕರ್ನಾಟಕ ಸರಕಾರದ ನೀರಾವರಿ ಸಲಹಾ ಮಂಡಳಿಯ ಅಧ್ಯಕ್ಷ ಚೆನ್ನಬಸಪ್ಪನವರು ಕೂಡ ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗೆ ಸರಕಾರ ತುರ್ತುಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಸಮತಾವಾದಿ ದೇಶಗಳಾದ ರಷ್ಯಾ-ಚೀನ ಮೊದಲಾದ ದೇಶಗಳಲ್ಲಿ ವೋಲ್ಗಾ-ಯಾಂಗ್ಸಿ ಮುಂತಾದ ಬೃಹತ್ ನೀರಾವರಿ ಯೋಜನೆಗಳಿವೆ. ನಮ್ಮ ರಾಜ್ಯದ ಅಣೆಕಟ್ಟುಗಳಿಗಿಂತಲೂ ಪೂರ್ವದಲ್ಲೇ ರಚಿಸಲ್ಪಟ್ಟು ಕಾಲುವೆಗಳ ಮೂಲಕ ಭೂಮಿಗೆ ನೀರುಣ್ಣಿಸುವ ಯೋಜನೆಗಳವು. ಅಲ್ಲಿ ಅಣೆಕಟ್ಟು, ಕಾಲುವೆ, ಕೆರೆಗಳು ಒಡೆದು, ರಿಪೇರಿಗಾಗಿ ಹಲವಾರು ತಿಂಗಳು ಭೂಮಿ, ಬೆಳೆ ಒಣಗಿಸುವ ಸುದ್ದಿಗಳು ಕೇಳಿಬರುತ್ತಿಲ್ಲ. ಯಾಕೆಂದರೆ ಅಲ್ಲಿ ಸ್ವಂತ ಹಿತ, ಕಾಂಟ್ರಾಕ್ಟರರ ಹಿತ, ರಾಜಕೀಯ ಲಾಭದ ಪ್ರಶ್ನೆಯಿಲ್ಲ. ಯೋಜನೆಯ ಉಳಿವಿಗಾಗಿ, ಭದ್ರತೆಗಾಗಿ, ಪ್ರತಿವರ್ಷ ನಿಯಮದಂತೆ ರಿಪೇರಿ ಕೆಲಸ ನಡೆಯುತ್ತಲೇ ಇರುತ್ತದೆ. ಕಾರಣ ಅಲ್ಲಿ ರಾಜಕಾರಣಿ ಮತ್ತು ತಜ್ಞರೊಳಗೆ ಭಿನ್ನಾಭಿಪ್ರಾಯವಿಲ್ಲ. ನಮ್ಮಲ್ಲಿ ರಾಜಕೀಯಕ್ಕೆ ಅಗ್ರಸ್ಥಾನವಾಗಿರುವುದರಿಂದ ಯಾವ ಯೋಜನೆ-ಕೆಲಸ ಸರಿಯಾಗಿ ನಡೆಯದೆ ಅನಾಹುತಕ್ಕೆ ಕಾರಣವಾಗುತ್ತಿದೆ.

ಸದ್ಯ ಪ್ರತಿವರ್ಷ ರೈತರಿಗೆ 2 ತಿಂಗಳು ನೀರು ಪೂರೈಕೆ ನಿಲ್ಲಿಸುತ್ತಿದ್ದರೂ, ಕಾಲುವೆಗಳ ರಿಪೇರಿಮಾಡಲಾಗುತ್ತಿಲ್ಲ. ಚೆನ್ನಬಸಪ್ಪನವರ ಸೂಚನೆಯಂತೆ ಎರಡು ವರ್ಷಗಳಲ್ಲಿ 6 ತಿಂಗಳು ಕಾಲ ನೀರು ನಿಲ್ಲಿಸಿದರೂ ಈ ಭ್ರಷ್ಟ ಆಡಳಿತೆಯಿಂದ ರಿಪೇರಿ ಕೆಲಸ ಮಾಡಿಸಲು ಸಾಧ್ಯವೇ? ಪ್ರಶ್ನಾರ್ಥಕವಲ್ಲವೇ? ಪ್ರಸಕ್ತ ಕಾಲುವೆಗೆ ಪೂರಕವಾಗಿ ಸುಮಾರು 30 ಮೈಲುದ್ದದ ಇನ್ನೊಂದು ನಾಲೆಯನ್ನು ತೋಡುವ ಸೂಚನೆಯನ್ನು ಚೆನ್ನಬಸಪ್ಪನವರು ಸರಕಾರದ ಮುಂದಿಟ್ಟಿದ್ದಾರೆ. ಈ ಪೂರಕ ನಾಲೆಗಾಗಿ ರೂ. 25ರಿಂದ ರೂ. 30 ಕೋಟಿ ಖರ್ಚಾಗುತ್ತದಂತೆ. ಎರಡು ವರ್ಷ 6 ತಿಂಗಳು ಕಾಲುವೆ ಮುಚ್ಚುವುದರಿಂದಲೂ ರೈತರಿಗೆ 15–20 ಕೋಟಿ ರೂಪಾಯಿ ಹಾನಿ, ಕುಡಿಯುವ ನೀರಿನ ತೊಂದರೆಯಾಗುತ್ತದಂತೆ. ಈ ಎರಡೂ ಸಲಹೆಗಳೂ ಸರಕಾರಕ್ಕೆ ಅರ್ಥವಾಗಲಿಕ್ಕಿಲ್ಲ. ಕೋಟಿ ರೂಪಾಯಿಗಳ ಖರ್ಚು! ಹೇಗೆ ಸಾಧ್ಯ. ಲಕ್ಷ ರೂಪಾಯಿಗಳ ಲೆಕ್ಕವಾದರೆ ಆಶ್ವಾಸನೆಗಳ ಮೂಲಕವಾದರೂ ತಪ್ಪಿಸಿಕೊಳ್ಳಬಹುದು. ಆದರೆ ಕೋಟಿ ಸಮಸ್ಯೆಗೆ ಪರಿಹಾರವೇನು? ಪರಿಹಾರವಿದೆ! ಅದೇನೆಂದರೆ ಬಲಿಷ್ಟವಾದ ರೈತರ ಚಳುವಳಿಯೇ ಬಂಡವಾಳಶಾಹಿ ಸರಕಾರದ ಬೆನ್ನುಮೂಳೆ ಮುರಿದು ತಿಳುವಳಿಕೆ ಉಂಟುಮಾಡಲು ಸಾಧ್ಯ. ದುರಾದೃಷ್ಟದಿಂದ ಭದ್ರಾ-ತುಂಗಭದ್ರಾ ಆಯಕಟ್ಟು ಪ್ರದೇಶದಲ್ಲಿ ಬಿಗುವಿನ ಬಾಣಬಿಡುವ ರೈತರಿನ್ನೂ ಹುಟ್ಟಿಲ್ಲ. ನಾವು ಅಂಥವರನ್ನು ತಯಾರಿಸಲು ಮುಂದಾಗೋಣವೇ?

೦.

ಸಿ.ಪಿ.ಐ. ರಾಷ್ಟ್ರೀಯ ಕೌನ್ಸಿಲಿನ ನಿರ್ಣಯ

(4ನೇ ಪುಟದಿಂದ)

ವಾಗ ಗಢವಾಲ್ ಚುನಾವಣಾ ಕ್ಷೇತ್ರದಲ್ಲಿ ನಡೆಸಲಾದ ವಂಚನೆಗಳ ಕುರಿತು ಚರ್ಚಿಸಲು ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್ ಅವರು ಕರೆದಿದ್ದ ಹನ್ನೆರಡು ವಿರೋಧ ಪಕ್ಷಗಳ ಸಭೆಗೆ ಸಿ ಪಿ. ಐ.(ಎಂ) ಹಾಜರಾದುದರ ಕುರಿತು ಸಿ. ಪಿ. ಐ.ಗೆ ಯಾಕೆ ಕೆಡುಕೆನ್ನಿಸಬೇಕು? ಬಿ. ಜೆ. ಪಿ.ಯನ್ನು ಆಮಂತ್ರಿಸಲಾಗಿದೆಯೆಂಬ ಒಂದೇ ಕಾರಣದ ಮೇಲೆ ಸಿ.ಪಿ.ಐ. ತಾನು ಸಭೆಯಲ್ಲಿ ಪಾಲುಗೊಳ್ಳಲಿಲ್ಲ ಅಷ್ಟೇ ಅಲ್ಲ; ಸಿ. ಪಿ. ಐ. (ಎಂ)ನ ಮೇಲೆ ಅಲ್ಲಸಲ್ಲದ ದೋಷಾರೋಪಣೆಯನ್ನೂ ಮಾಡುತ್ತಿದೆ. ಈ ಸಭೆಯನ್ನು ನಮ್ಮ ಪಕ್ಷವೇನೂ ಕರೆದಿರಲಿಲ್ಲ. ನಿರ್ದಿಷ್ಟ ಪ್ರಶ್ನೆಗಳ ಮೇಲೆ ವಿರೋಧ ಪಕ್ಷಗಳು ನಡೆಸುವ ಇಂತಹ ಜಂಟಿ ಕಾರ್ಯಕ್ರಮದಲ್ಲಿ 'ಒಂದೋ ಬಿ.ಜೆ. ಪಿ.ಯನ್ನು ಹೊರಗಿಡಿರಿ, ಇಲ್ಲವಾದರೆ ನಾವು ನಿಮ್ಮೆಲ್ಲರೊಂದಿಗೆ ಸೇರುವುದಿಲ್ಲ' ಎನ್ನುವ ಆಜ್ಞೆ ಮಾಡುವ ಅಧಿಕಾರ ಸಿ. ಪಿ. ಐ. ಗೆ ಏನಿದೆ?

ಇಂದಿನ ಆಳವಾಗುತ್ತಿರುವ ಆರ್ಥಿಕ ಮುಗ್ಗಟ್ಟು ಮತ್ತು ಅದರೊಂದಿಗೇ ತೀವ್ರಗೊಳ್ಳುತ್ತಿರುವ ರಾಜಕೀಯ ಮುಗ್ಗಟ್ಟಿನಿಂದಾಗಿ ಸರ್ವಾಧಿಕಾರಿ ಶಕ್ತಿಗಳು ಬೆಳೆದುಬರುತ್ತಿರುವುದರ ಹಿನ್ನೆಲೆಯಲ್ಲಿ ವಿಶಾಲ ತಳಹದಿಯ ಸರ್ವಾಧಿಕಾರ ವಿರೋಧಿರಂಗದ ಅಗತ್ಯವನ್ನಾಗಲೀ ಅದರ ಅರ್ಥವನ್ನಾಗಲೀ ಗ್ರಹಿಸಲು ಸಿ. ಪಿ. ಐ. ಅಸಮರ್ಥವಾಗಿದೆಯೆನ್ನುವುದನ್ನು ವಿಷಾದದಿಂದ ಹೇಳಬೇಕಾಗಿದೆ. ಇಂದಿನ ರಾಜಕೀಯ ಪರಿಸ್ಥಿತಿಯ ಸವಾಲುಗಳನ್ನೆದುರಿಸಲು ಎಡ ಪ್ರಜಾಸತ್ತಾತ್ಮಕ ರಂಗದ ನಿರ್ಮಾಣವೊಂದೇ ಪರಿಹಾರವೆಂದು ಸಿ. ಪಿ. ಐ. ಭಾವಿಸಿದಂತಿದೆ. ಎಡಶಕ್ತಿಗಳು ಮನಸ್ಸು ಮಾಡಿದರೆ ಅವು ಬೃಹದ್ಗಾತ್ರಕ್ಕೆ ಬೆಳೆದು ದೇಶದ ರಾಜಕೀಯ ಜೀವನದ ಮೇಲೆ ಅಭೂತಪೂರ್ವ ಪರಿಣಾಮ ಬೀರಬಲ್ಲವೆಂದೂ ಇತರ ಪಕ್ಷಗಳಲ್ಲಿನ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳಬಹುದೆಂದೂ ಸಿ. ಪಿ. ಐ. ಸಾರಿಕೊಂಡಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಇದೊಂದು ಬಡಾಯಿ ಮಾತ್ರ ಎಂದೇ ಹೇಳಬೇಕಾಗುತ್ತದೆ.

ಹೋರಾಟಕ್ಕೆ ಬೆಂಬಲ

ದಾಂಡೇಲಿಯಲ್ಲಿ ಇಂಡಿಯನ್ ಪ್ಲೈವುಡ್ ಕಾರ್ಮಿಕರು ಮೂವತ್ತು ವರ್ಷಗಳಿಂದ ಶೋಷಣೆಗೊಳಗಾಗಿದ್ದಾರೆ. ದಾಂಡೇಲಿ ವಿಭಾಗದ ಇತರ ಕಾರ್ಮಿಕರು ಸಿ. ಐ. ಟಿ. ಯು. ಅಡಿಯಲ್ಲಿ ಸಂಘಟಿತರಾಗಿ ಅನೇಕ ಹೋರಾಟಗಳನ್ನು ಮಾಡಿ ತಮ್ಮ ಬೇಡಿಕೆ ಪಡೆದುಕೊಂಡಿದ್ದಾರೆ. ಆದರೆ ಪ್ಲೈವುಡ್ ಕಾರ್ಖಾನೆಯಲ್ಲಿ ಸರಿಯಾದ ಸಂಘಟನೆಯೇ ಇಲ್ಲ. ಕಂಟ್ಟಿ ಎಂಬೊಬ್ಬನ ನೇತೃತ್ವದ ಚಮಚಾ ಯೂನಿಯನ್ ಇದೆ. ಕಾರ್ಮಿಕರನ್ನು ಕೇವಲ 4-5 ರೂ.ಗಳಲ್ಲೇ ದುಡಿಸಲಾಗುತ್ತಿದೆ. ಇನ್ನೂವರೆಗೂ ದಿನಗೂಲಿಯಲ್ಲೇ ದುಡಿಯುತ್ತಿದ್ದಾರೆ.

1978ರಲ್ಲಿ ಜಾರಿಗೊಳಿಸಲಾದ ಕನಿಷ್ಠ ವೇತನ ಸೌಲಭ್ಯವೂ ಈ ಕಾರ್ಮಿಕರಿಗೆ ದೊರೆತಿಲ್ಲ. ಈ ಕನಿಷ್ಠ ವೇತನದ ಬದಲು ಇತ್ತೀಚೆಗೆ ತಲಾ 35 ರೂ.ಗಳನ್ನು ಕೊಡಲು ಆಡಳಿತ ವರ್ಗ ಸಂಚು ನಡೆಸಿತ್ತು. ಆಡಳಿತ ವರ್ಗದ ಈ ಕ್ರಮಕ್ಕೆ ಕಂಟ್ಸಿ ಯೂನಿಯನ್‌ನ ಬೆಂಬಲ ಬೇರೆ.

ಇದನ್ನು ವಿರೋಧಿಸಿ ಐ.ಪಿ.ಎಂ. ಕಾರ್ಮಿಕರು ಸಿ. ಐ. ಟಿ. ಯು. ನೇತೃತ್ವದಲ್ಲಿ ಸಂಘಟಿತರಾದಾಗ ಆಡಳಿತವರ್ಗ ಈ ಸಂಘಟನೆಯ ಇಬ್ಬರು ಸಕ್ರಿಯ ಕಾರ್ಯಕರ್ತರನ್ನು ಸಸ್ಪೆಂಡ್ ಮಾಡಿದೆ. ಇದನ್ನು ಪ್ರತಿಭಟಿಸಿ ಐ. ಪಿ. ಎಂ. ಕಾರ್ಮಿಕರು 16-9-81ರಂದು ಟೂಲ್ಸ್‌ಡೌನ್ ಸ್ಟ್ರೈಕ್ ಮಾಡಿದರು. 18-9-81 ರಂದು ಐ. ಪಿ. ಎಂ. ಕಾರ್ಮಿಕರನ್ನು ಬೆಂಬಲಿಸಿ ದಾಂಡೇಲಿ ಪೇಪರ್ ಮಿಲ್ಲಿನ ಮತ್ತು ಡಿ. ಎಫ್. ಎ. ನ ಸಹಸ್ರಾರು ಕಾರ್ಮಿಕರು ಮೆರವಣಿಗೆ ಕೊಂಡೊಯ್ದು ತಮ್ಮ ಬೆಂಬಲ ವ್ಯಕ್ತಪಡಿಸಿದರು. ಅಂದು ಸಾಯಂಕಾಲ ಐ. ಪಿ. ಎಂ. ಮುಂಭಾಗದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿ ಐ. ಪಿ. ಎಂ. ಆಡಳಿತವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ಆರ್. ಜಿ. ಸ್ಥಳೇಕರ್, ರಾಜೇಂದ್ರ, ಮೋಹನ್ ಪಾರೀಶ್‌ವಾಡ ಮುಂತಾದವರು ಮಾತನಾಡಿದರು. ಐ. ಪಿ. ಎಂ. ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ತೀವ್ರಕ್ರಮಕೈಗೊಳ್ಳಬೇಕಾದೀತೆಂದು ಎಚ್ಚರಿಸಲಾಯಿತು.

ಯಾವಾಗಲೂ ಆಡಳಿತವರ್ಗಕ್ಕೆ ಬೆಂಬಲಕೊಡುವ ಪೋಲೀಸ್ ಇಲಾಖೆ ದಾಂಡೇಲಿಯಲ್ಲಿ ಪ್ರತಿಬಂಧಕಾಜ್ಞೆ ಜಾರಿಮಾಡಿದೆ. ಕಾರ್ಮಿಕರನ್ನು ತೀವ್ರ ಹಿಂಸಿಸುತ್ತಿದೆ.

ದಿನಾಂಕ 23ರಂದು ಧಾರವಾಡದ ಪ್ಲೈವುಡ್ ಕಾರ್ಮಿಕರನ್ನು ಉದ್ದೇಶಿಸಿ ಸಿ. ಐ. ಟಿ. ಯು.ಕಾರ್ಯದರ್ಶಿ ಕಾಂ. ವಿಜೆಕೆ ನಾಯರ್, ವಿ. ಎನ್. ಹಳಕಟ್ಟಿ ಮತ್ತು ಧಾರವಾಡಪ್ಲೈವುಡ್ ಕಾರ್ಮಿಕರ ಸಂಘದ ಉಪಾಧ್ಯಕ್ಷ ಕಾಂ. ಎಂ ಬಿ. ಕಟ್ಟಿ ಮಾತನಾಡುತ್ತಾ ದಾಂಡೇಲಿ ಪ್ಲೈವುಡ್ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿದರು. ಆಡಳಿತ ವರ್ಗ ಕಾರ್ಮಿಕವಿರೋಧಿ ನೀತಿಯನ್ನು ಕೈಬಿಡದಿದ್ದಲ್ಲಿ ಸಂಯುಕ್ತ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಪ್ರತಿಭಟನಾ ಮೆರವಣಿಗೆ

ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಕೆಲವು ಕಾಲೇಜಿನ ವಿದ್ಯಾರ್ಥಿಗಳ ಬೇಡಿಕೆಗಳಾದ ಪರೀಕ್ಷಾ ಶುಲ್ಕವನ್ನು ಕಡಿಮೆಮಾಡಬೇಕು, ವಿದ್ಯಾರ್ಥಿನಿಲಯಗಳನ್ನು ಹೆಚ್ಚಿಸಬೇಕು, ವಿದ್ಯಾರ್ಥಿಗಳ ಸಂಘ ರಚನೆಯನ್ನು ಮಾಡುವ ಅವಕಾಶವನ್ನು ಕಲ್ಪಿಸಬೇಕು, ಬೆಂಗಳೂರಿನ ವಿದ್ಯಾರ್ಥಿ ಕ್ರಿಯಾಸಮಿತಿ ಮುಖಂಡ ಅಂಜನಪ್ಪನವರ ಮೇಲೆ ನಡೆದ ಹಲ್ಲೆಯ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಬಂಧಿಸಬೇಕು ಇವೇ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು 19-9-81ರಂದು ತುಮಕೂರಿನಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ಹೊರಡಿಸಿದ್ದರು.

ನಗರದ ಸರಕಾರಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳು ಜೊತೆಗೂಡಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ರಾಜ್ಯದ ಹಲವಾರು ಕಡೆ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟವನ್ನು ಸರಕಾರ ಕಡೆಗಣಿಸಿ ಚಳುವಳಿಯನ್ನು ದಮನಮಾಡಲೆತ್ನಿಸುತ್ತಿರುವ ಸರಕಾರದ ಕ್ರಮ ಪ್ರತಿಭಟಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಮೆರವಣಿಗೆಯ ನೇತೃತ್ವವನ್ನು ನಗರದ ಎಸ್. ಎಫ್. ಐ. ಮುಖಂಡರಾದ ಆರ್. ರವೀಂದ್ರನಾಯಕ್, ಮಾರಣ, ಈರಪ್ಪ ಮತ್ತು ಮಂಜುನಾಥ ಮತ್ತಿತರರು ವಹಿಸಿದ್ದರು.

●

ಕೋಲಾರ ಜಿಲ್ಲಾ ರೈತ ಸಂಘದ ಸಭೆ

28-9-81 ರಂದು ಮುಳುಬಾಗಿಲುನಲ್ಲಿ ಕೋಲಾರ ಜಿಲ್ಲಾ ರೈತಸಂಘದ ಕಾರ್ಯಕಾರಿ ಸಮಿತಿ ಸಭೆ ಸೇರಿತ್ತು. ಅಧ್ಯಕ್ಷತೆಯನ್ನು ಕಾಂ. ಆರ್. ವೆಂಕಟರಾಮಯ್ಯ ವಹಿಸಿದ್ದರು. ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಊಜಿನೊಣದ ಹಾವಳಿ, ರೇಷ್ಮೆ ಮೊಟ್ಟೆಗಳ ಬೆಲೆ ಏರಿಸಿರುವುದರ ಕುರಿತು ರೇಷ್ಮೆ ಇಲಾಖೆಯ ಮಂತ್ರಿಯ ಬಳಿ ರೈತಸಂಘದ ನಿಯೋಗ ಕೊಂಡೊಯ್ಯಬೇಕು.

ಚಿಕ್ಕಬಳ್ಳಾಪುರ ತಾಲೂಕಿನ ಅಂಗರೇಖನಹಳ್ಳಿ ಭೂಹೀನರು ಸಾಗುವಳಿ ಮಾಡುತ್ತಿದ್ದ ಸರ್ಕಾರಿ ಭೂಮಿಯನ್ನು ಅವರಿಗೇ ಕೊಟ್ಟು ಸಾಗುವಳಿ ಚೀಟಿ ನೀಡಬೇಕು.

ಭೂನ್ಯಾಯ ಮಂಡಳಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟಬೇಕು.

ಮುಳುಬಾಗಿಲಿನ ನಟರಾಜ ಚಿತ್ರಮಂದಿರದ ಮುಂದೆ ಇದ್ದ ದಲಿತರ ಗುಡಿಸಲುಗಳನ್ನು ಬೆಂಕಿಇಟ್ಟು ಸುಟ್ಟುಹಾಕಿರುವುದನ್ನು ಸಭೆ ಖಂಡಿಸಿ, ದಲಿತರಿಗೆ ಯೋಗ್ಯ ರಕ್ಷಣೆ ಮತ್ತು ನೊಂದವರಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಯಿತು.

ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಅತಿವೃಷ್ಟಿಯಿಂದ ಹಾನಿಗೊಳಗಾದ ಕುಟುಂಬಗಳಿಗೆ ತಕ್ಷಣ ಸೂಕ್ತ ಪರಿಹಾರ ನೀಡಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲರಿಗೂ ರೇಷನ್‌ಕಾರ್ಡ್ ಕೊಟ್ಟು ನಿತ್ಯಾವಶ್ಯಕ ವಸ್ತುಗಳನ್ನು ಒದಗಿಸಬೇಕು.

○

ವಿಚಾರ ಸಂಕಿರಣ

20-9-81 ರಂದು ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಮತ್ತು ವಿಕಾಸ ಯುವಕ ಸಂಘಗಳ ಆಶ್ರಯದಲ್ಲಿ "ಮತಾಂತರ-ಇಂದಿನ ಸಮಸ್ಯೆಗಳಿಗೆ ಪರಿಹಾರ" ಈ ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ಈ ವಿಚಾರ ಸಂಕಿರಣದಲ್ಲಿ ಶ್ರೀ ಶರಬಣ್ಣ ನಾಗಲಾಪುರ, ರಾಮಕೃಷ್ಣ, ವಿಕ್ರಮ, ಚಿನ್ನಪ್ಪ, ಬಂಗಾರಶೆಟ್ಟಿ ಮತ್ತು ಶ್ರೀಮತಿ ರಾಧಾಕೃಷ್ಣಮೂರ್ತಿ ಇವರುಗಳು ಪ್ರಬಂಧ ಮಂಡಿಸಿದರು.

ಎಂ. ಮಲ್ಲಪ್ಪ (ವಕೀಲರು) ಈ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.

●

ಸರದಿ ಉಪವಾಸ ಮುಷ್ಕರ

ಭಾರತ ಸರಕಾರದ ಉಕ್ಕು ಮತ್ತು ಗಣಿ (Steel & Mines) ಮಂತ್ರಿಗಳಿಂದ ಒಪ್ಪಲ್ಪಟ್ಟ ಪರಿಷ್ಕೃತ ವೇತನವನ್ನು ಈ ಕೂಡಲೇ ನೀಡಬೇಕೆಂದು ಒತ್ತಾಯಿಸಿ ಕೆ. ಜಿ. ಎಫ್.ನಲ್ಲಿ ಸೆಪ್ಟೆಂಬರ್ 25ರಿಂದ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭವಾಗಿದೆ.

ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್‌ನ ಕಾರ್ಯದರ್ಶಿಯವರಾದ ಕಾಂ. ಎಸ್. ಸವರಿದಾಸ್, ಎಸ್. ಸುಬ್ರಮಣಿ, ಎಸ್. ರಾಮಸ್ವಾಮಿ, ಎ. ಕಾಸಿ ಮತ್ತು ಜಿ. ಎಸ್. ರಾಘವೇಂದ್ರ ಇವರು ಸರದಿ ಉಪವಾಸ ಮುಷ್ಕರವನ್ನು (ಸೆ. 25ರಂದು) ಪ್ರಾರಂಭಿಸಿದರು.

ಈ ಕುರಿತು ಹೇಳಿಕೆಯೊಂದನ್ನು ಹೊರಡಿಸಿದ ಸಂಘದ ಉಪಾಧ್ಯಕ್ಷ ಕಾಂ. ಟಿ. ಎಸ್. ಮಣಿಯವರು ಸರಕಾರ ಪರಿಷ್ಕೃತ ವೇತನ ಜಾರಿಮಾಡುವಂತೆ ಆಜ್ಞೆ ಹೊರಡಿಸುವವರೆಗೂ ಹೋರಾಟ ಮುಂದುವರಿಯುವುದೆಂದು ತಿಳಿಸಿದ್ದಾರೆ.

●

ಡಿ.ವೈ.ಎಫ್.ಐ. ಕಾರ್ಯಕರ್ತರ ಸಭೆ

12-9-81 ರಂದು ತೊಡಿಖಾನ ಗ್ರಾಮದ ಡಿ. ವೈ. ಎಫ್. ಐ. ಕಾರ್ಯಕರ್ತರ ಸಭೆ ಕಾಂ. ಈಶ್ವರರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಸುಳ್ಯ ತಾಲ್ಲೂಕು ಡಿ. ವೈ. ಎಫ್. ಐ.ನ ಅಧ್ಯಕ್ಷ ಕಾಂ. ಪಿ. ಕೆ. ಮೂಸಾ, ಕಾರ್ಯದರ್ಶಿ ಕಾಂ. ಎ. ಜಯರಾಮ ಮತ್ತು ಚಿನ್ನಪ್ಪನವರು ಆಗಮಿಸಿದ್ದು ಯುವಜನ ಸಂಘಟನೆಯನ್ನು ಬಲಪಡಿಸುವ ಕುರಿತು ವಿವರಿಸಿದರು.

ನಂತರ ತೊಡಿಖಾನ ಗ್ರಾಮ ಮಟ್ಟದ ಯುವಜನ ಸಂಘಟನೆಯ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಗೆ ಅಧ್ಯಕ್ಷರಾಗಿ ಎನ್. ರಾಮಚಂದ್ರ, ಉಪಾಧ್ಯಕ್ಷರಾಗಿ ಬೆಳ್ಯಪ್ಪ, ಕಾರ್ಯದರ್ಶಿಯಾಗಿ ಕೆ. ಪದ್ಮಯ್ಯ, ಉಪಕಾರ್ಯದರ್ಶಿಯಾಗಿ ಶೇಷಪ್ಪ ಮತ್ತು 13 ಜನ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ಚುನಾಯಿಸಲಾಯಿತು.

○

ನೂತನ ಸಂಘ ಸ್ಥಾಪನೆ

19-9-81 ರಂದು ಬಂಟ್ವಾಳ ತಾಲೂಕಿನ ಹೋಟೆಲ್ ಮತ್ತು ಲೋಡ್, ಅನ್‌ಲೋಡ್ ಕಾರ್ಮಿಕರ ಸಭೆಯು ಬಂಟ್ವಾಳದಲ್ಲಿ ಸೇರಿತ್ತು. ಅಧ್ಯಕ್ಷತೆಯನ್ನು ಕಾಂ. ಬಿ. ಪಾಸುಂಗಟ್ಟಿಯವರು ವಹಿಸಿದ್ದರು. ನೂತನವಾಗಿ ರಚಿತವಾದ ಸಂಘಕ್ಕೆ ಜನರಲ್ ವರ್ಕರ್ಸ್ ಯೂನಿಯನ್ ಬಂಟ್ವಾಳ ಎಂದು ಹೆಸರಿಡಲಾಯಿತು. ಸಂಘಕ್ಕೆ ಕಾಂ. ಬಿ. ಎಚ್. ಬಂಗೇರ ಅಧ್ಯಕ್ಷರಾಗಿರುವ ಕಾರ್ಯಕಾರಿ ಸಮಿತಿಯೊಂದನ್ನು ಚುನಾಯಿಸಲಾಯಿತು.

ಸಿ. ಐ. ಟಿ. ಯು. ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ಈ ಸಂದರ್ಭದಲ್ಲಿ ಮಾತನಾಡಿ ಸಂಘಟನೆಯನ್ನು ಬಲಪಡಿಸಲು ಕೇಳಿಕೊಂಡರು. ಕೊನೆಯಲ್ಲಿ ಕಾಂ. ಗೋಪಾಲಗೌಡ ವಂದಿಸಿದರು.

●

ಗ್ರಾಮ ಸಮಿತಿ

28-9-81ರಂದು ಹೊಸಕೋಟೆ ತಾಲ್ಲೂಕು ಅನುಗೊಂಡನಹಳ್ಳಿ ಹೋಬಳಿ ನಾಗನಾಯಕನಕೋಟೆ ಗ್ರಾಮದಲ್ಲಿ ರೈತಸಂಘದ ತಾಲ್ಲೂಕು ಕಾರ್ಯದರ್ಶಿಯವರಾದ ಕಾಂ.ಆರ್. ಆರ್. ಮನೋಹರರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ನಾಗನಾಯಕನಕೋಟೆ ರೈತಸಂಘದ ಗ್ರಾಮಸಮಿತಿಯನ್ನು ರಚಿಸಲಾಯಿತು.

ಗ್ರಾಮ ಸಮಿತಿಯ ಅಧ್ಯಕ್ಷರನ್ನಾಗಿ ಕಾಂ. ಎನ್. ಆರ್. ಗೋಪಾಲ್‌ರನ್ನು, ಕಾರ್ಯದರ್ಶಿಯಾಗಿ ನಾರಾಯಣಸ್ವಾಮಿ, ಸಹಕಾರ್ಯದರ್ಶಿಯಾಗಿ ಮುನಿಶಾಮಿ ಮತ್ತು ಖಜಾಂಚಿಯಾಗಿ ಚಿನ್ನಪ್ಪಯ್ಯನವರನ್ನು ಆಯ್ಕೆ ಮಾಡಲಾಯಿತು. ಹಾಗೂ ಐದು ಜನರ ಕಾರ್ಯಕಾರಿ ಸಮಿತಿಯನ್ನೂ ಚುನಾಯಿಸಲಾಯಿತು.

○

"ರಾಜ್ಯದಾದ್ಯಂತ ಬೀಡಿ ಕಾರ್ಮಿಕರ ಯಶಸ್ವೀ ಧರಣಿ ಸತ್ಯಾಗ್ರಹ"

(ಒಂದನೇ ಪುಟದಿಂದ)

ರರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಸುಮಾರು 500 ಜನ ಬೀಡಿ ಕಾರ್ಮಿಕರು ಬಿ. ಸಿ. ರೋಡಿನಲ್ಲಿ ಮೆರವಣಿಗೆ ನಡೆಸಿದರು. ನಂತರ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಬಿ. ಎಚ್. ಬಂಗೇರ ವಹಿಸಿದ್ದರು: ಆರಂಭದಲ್ಲಿ ಕಾಂ. ಬಿ. ನಾರಾಯಣ ಸ್ವಾಗತಿಸಿದರು. ಕಾಂ. ವಾಸುಗಟ್ಟಿ ಮತ್ತು ಬಿ. ಎಚ್. ಬಂಗೇರ ಮಾತನಾಡಿ ಸಂಘಟಿತ ಹೋರಾಟಕ್ಕೆ ಕರೆ ನೀಡಿದರು.

ಶಿರಾ

21-9-81ರಂದು ತುಮಕೂರು ಜಿಲ್ಲೆಯ ಶಿರಾದಲ್ಲಿ ನೂರಾರು ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರು ಶಿರಾ ತಾಲ್ಲೂಕು ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ಯೂನುಸ್‌ಖಾನ್, ಅಂಜಪ್ಪ ಮಾತನಾಡಿ ಕನಿಷ್ಟ ವೇತನಕ್ಕಾಗಿ ಒತ್ತಾಯಿಸಿದರು. ನಂತರ ತಹಶೀಲ್ದಾರರಿಗೆ ಮನವಿ ಅರ್ಪಿಸಲಾಯಿತು.

ಉಡುಪಿ

ರಾಜ್ಯ ಬೀಡಿ ಫೆಡರೇಷನ್‌ನ ತೀರ್ಮಾನದಂತೆ 21-9-81ರಂದು ಬೆಳಿಗ್ಗೆ ಬೀಡಿ ಮಜೂರರು ತಾಲ್ಲೂಕು ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಈ ಧರಣಿಯಲ್ಲಿ ಉಡುಪಿ, ಮಲ್ಪೆ, ಕೊಡವೂರು, ಕಾಪು, ಪಡುಬಿದ್ರಿ ಮುಂತಾದ ಕಡೆಗಳಿಂದ ಸುಮಾರು 250 ಕಾರ್ಮಿಕರು ಪಾಲ್ಗೊಂಡಿದ್ದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ಅಬ್ರಹಾಂ ಕರ್ಕಡ ಮಾತನಾಡಿದರು. ಕೊನೆಯಲ್ಲಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಕುಣಿಗಲ್

21-9-81ರಂದು ಬೀಡಿ ಫೆಡರೇಷನ್ನಿನ ಕರೆಯಂತೆ ತಾಲ್ಲೂಕಿನ ಬೀಡಿ ಕೆಲಸಗಾರರು ಕುಣಿಗಲ್ ತಹಶೀಲ್ದಾರರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಈ ಮುನ್ನ ಬೀಡಿಕೆಲಸಗಾರರು ಭಾರೀ ಮೆರವಣಿಗೆ ಹೊರಡಿಸಿದ್ದರು. ತಹಶೀಲ್ದಾರರ ಕಚೇರಿಯಲ್ಲಿ ಭೂನ್ಯಾಯ ಮಂಡಳಿ ಸಭೆ ನಡೆಯುತ್ತಿತ್ತು. ಹಾಜರಿದ್ದ ತುಮಕೂರು ಜಿಲ್ಲಾ ಉಪ ವಿಭಾಗಾಧಿಕಾರಿಗಳು ಟ್ರಿಬ್ಯೂನಲ್ ನಿಲ್ಲಿಸಿ ಹೊರಗೆ ಬಂದು ಮನವಿ ಸ್ವೀಕರಿಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ಅಂಜಪ್ಪ, ಯೂನುಸ್‌ಖಾನ್ ಮತ್ತು ಕಾಂ. ಬಡೇಸಾಬ್ ಮಾತನಾಡಿ ಕನಿಷ್ಠ ವೇತನ ಜಾರಿಗೆ ಒತ್ತಾಯಿಸಿದರು. ನೆರೆಯ ಕೇರಳದಲ್ಲಿ ಶೋಷಣೆಗೆ ಅವಕಾಶವಿಲ್ಲದಂತೆ ಸೊಸೈಟಿ ಮುಖಾಂತರ ಬೀಡಿ ಫ್ಯಾಕ್ಟರಿ ನಡೆಸಲು ವ್ಯವಸ್ಥೆ ಮಾಡಬೇಕೆಂದೂ ಒತ್ತಾಯಿಸಿದರು.

ಮಂಗಳೂರಿನಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮಹಿಳೆಯರೇ ಇದ್ದು, ಜಡಿಮಳೆಯನ್ನೂ ಲೆಕ್ಕಿಸದೆ ಸಹಸ್ರಾರು ಸಂಖ್ಯೆಯಲ್ಲಿ ಬೀಡಿಕಾರ್ಮಿಕರು ಧರಣಿ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದ್ದಾರೆ. ಇನ್ನೂ ಹಲವೆಡೆ ಯಶಸ್ವೀ ಧರಣಿ ನಡೆದ ವಾರ್ತೆ ಇದೆ. ಕನಿಷ್ಠ ಕೂಲಿಯನ್ನು ಶಿಫಾರಸು ಮಾಡಿರುವಂತೆ ಜಾರಿಗೊಳಿಸದಿದ್ದಲ್ಲಿ ದೀರ್ಘಕಾಲದ ಹೋರಾಟವನ್ನು ನಡೆಸಲು ಬೀಡಿಕಾರ್ಮಿಕರು ಹಿಂಜರಿಯಲಾರರು ಎಂದು ಬೀಡಿಕಾರ್ಮಿಕರ ರಾಜ್ಯ ಫೆಡರೇಷನ್ನಿನ ಮುಂದಾಳುಗಳು ಸರಕಾರಕ್ಕೆ, ಬೀಡಿ ಮಾಲಕರುಗಳಿಗೆ ಎಚ್ಚರಿಕೆ ಇತ್ತಿರುವರು.

●

ಚೈನಾಕ್ಕೆ ಶುಭಾಶಯಗಳು

(ಒಂದನೇ ಪುಟದಿಂದ)

ಪ್ರೋತ್ಸಾಹಿಸುತ್ತಿವೆ. ಶಸ್ತ್ರಾಸ್ತ್ರಗಳ ಪೈಪೋಟಿ ನಡೆಯುತ್ತಿದ್ದು ಜಗತ್ತಿನ ಶಾಂತಿಗೆ ಅಪಾಯವಿದೆ. ಅಣು ಶಸ್ತ್ರಾಸ್ತ್ರಗಳನ್ನು ಶೇಖರಿಸುವುದು, ಮಿಲಿಟರಿ ನೆಲೆಗಳನ್ನು ಸ್ಥಾಪಿಸುವುದು, ಶಾಂತಿಯನ್ನು ಕೆದಕುವುದು ಇವೆಲ್ಲಾ ನಡೆಯುತ್ತಿವೆ. ಸಮಾಜವಾದಿ ಕೂಟದಲ್ಲಿನ ಬಿರುಕು, ಅದರಲ್ಲೂ ಮುಖ್ಯವಾಗಿ ಸಮಾಜವಾದಿ ಚೈನಾ ಮತ್ತು ಸೋವಿಯೆಟ್ ಯೂನಿಯನ್ನುಗಳ ಮಧ್ಯೆ ಉಂಟಾಗಿರುವ ತಿಕ್ಕಾಟ ಸಾಮ್ರಾಜ್ಯಶಾಹಿಯ ಯೋಜನೆಗಳಿಗೆ ಸಹಕಾರಿಯಾಗಿದೆ. ಈ ಬಿರುಕು ಚೈನಾ ದೇಶವೂ ಸೇರಿ ಅನೇಕ ಸಮಾಜವಾದಿ ರಾಷ್ಟ್ರಗಳಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಬೆಳೆಸುವ ಕೆಲಸವನ್ನು ಕುಂಠಿತಗೊಳಿಸುತ್ತಲಿದೆ.

ಸಾಂಸ್ಕೃತಿಕ ಕ್ರಾಂತಿಯ ಸಂದರ್ಭ ಮಾಡಿದ ತಪ್ಪುಗಳನ್ನು ಸರಿಪಡಿಸಲು ಚೈನಾದ ಕಮ್ಯುನಿಸ್ಟ್ ಪಕ್ಷವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಿ.ಪಿ.ಐ.(ಎಂ) ತೃಪ್ತಿಪಡುತ್ತದೆ. ಅದೇ ಸಂದರ್ಭ ಸೋವಿಯೆಟ್ ಯೂನಿಯನ್ನು ಜಾಗತಿಕ ಶಾಂತಿಯ ಮುಖ್ಯ ಶತ್ರು, ಸೋವಿಯೆಟ್ ದೇಶವು ಸಮಾಜವಾದಿ ಸಾಮ್ರಾಜ್ಯಶಾಹಿ ಎಂಬ ವಾದ ಮತ್ತು ಮೂರು ಜಗತ್ತುಗಳ ವಾದದ ಮೇಲೆ ಆಧಾರಿತವಾಗಿರುವ ಚೈನಾ ದೇಶದ ವಿದೇಶಿ ಧೋರಣೆ (ಅಂತರ್ರಾಷ್ಟ್ರೀಯ ಧೋರಣೆ)ಯ ಬಗ್ಗೆ ಸಿ.ಪಿ.ಐ(ಎಂ) ಆತಂಕ ವ್ಯಕ್ತಪಡಿಸುತ್ತದೆ. ಈ ನಿಲುವೆಯು ಪ್ರಾಯೋಗಿಕವಾಗಿ ಅಮೇರಿಕಾ ಸಾಮ್ರಾಜ್ಯಶಾಹಿಗೆ ಸಹಾಯ ಮಾಡುತ್ತದೆ. ಒಂದು ದಶಕದ ಕಾಲ ನಡೆದ ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ರೂಪಿತಗೊಂಡ ಈ ಧೋರಣೆಗಳು ತಪ್ಪು ಸೈದ್ಧಾಂತಿಕ ತಳಹದಿಯ ಮೇಲಿವೆ.

ಸಮಾಜವಾದಿ ರಾಷ್ಟ್ರಗಳೊಳಗಿನ ಭಿನ್ನಾಭಿಪ್ರಾಯಗಳಿಗೆ ಯಾರು ಹೆಚ್ಚು ಕಾರಣ ಎಂಬ ವಾದ-ವಿವಾದಕ್ಕೆ ಈ ಸಂದರ್ಭದಲ್ಲಿ ಹೋಗದೆ, ಜಾಗತಿಕ ಕಮ್ಯುನಿಸ್ಟ್ ಐಕ್ಯತೆಯ ಪರವಾಗಿ ಸಿ. ಪಿ. ಐ. (ಎಂ) ತನ್ನ ಸ್ವರವನ್ನು ಎತ್ತುತ್ತದೆ. ಸೋವಿಯೆಟ್ ರಶಿಯಾ ಮತ್ತು ಚೈನಾ ಜನತಾ ಗಣರಾಜ್ಯಗಳೊಳಗಿನ ಐಕ್ಯತೆಯೇ ಜಾಗತಿಕ ಕಮ್ಯುನಿಸ್ಟ್ ಐಕ್ಯತೆಗೆ ಬೆನ್ನೆಲುಬಾಗಿರಬೇಕು. ಈ ವಿಚಾರದಲ್ಲಿ ನಮ್ಮ ಸ್ವರವನ್ನು ಎತ್ತುವುದು ನಮ್ಮ ಕರ್ತವ್ಯವಾಗಿದೆ.

ಭಾರತ ದೇಶ ಮತ್ತು ಚೈನಾಗಳೊಳಗೆ ಸಂಬಂಧವನ್ನು ಉತ್ತಮಗೊಳಿಸುವ ಪ್ರಯತ್ನಕ್ಕೆ ಈ ಸಂದರ್ಭದಲ್ಲಿ ಸಿ. ಪಿ. ಐ. (ಎಂ) ಯಶಸ್ಸನ್ನು ಕೋರಿದೆ. ಹಾಗೆಯೇ ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರವು ಸಾಮ್ರಾಜ್ಯಶಾಹಿಯ ಸಹಾಯ ಪಡೆಯುವ ಯತ್ನಕ್ಕೆ ಚೈನಾವು ಬೆಂಬಲ ನೀಯುವುದಕ್ಕೆ ಸಿ. ಪಿ. ಐ. (ಎಂ) ತನ್ನ ಆತಂಕವನ್ನೂ ವ್ಯಕ್ತಪಡಿಸುತ್ತಿದೆ.

ಮೂವತ್ತೆರಡನೆ ವಾರ್ಷಿಕೋತ್ಸವ ಸಂದರ್ಭ ಮತ್ತೊಮ್ಮೆ ಚೈನಾ ದೇಶದ ಜನತೆ ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಅಭಿನಂದಿಸುವುದರೊಂದಿಗೆ, ಸಮಾಜವಾದಿ ಬಣದಲ್ಲಿರುವ ಭಿನ್ನಾಭಿಪ್ರಾಯವನ್ನು ಅಮೇರಿಕಾ ಸಾಮ್ರಾಜ್ಯಶಾಹಿಯು ಉಪಯೋಗಿಸಿಕೊಳ್ಳುವುದರ ವಿರುದ್ಧ ಕಮ್ಯುನಿಸ್ಟ್ ಚಳುವಳಿ, ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆ, ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದಗಳು ಐಕ್ಯತೆಯನ್ನು ರೂಪಿಸಿಕೊಳ್ಳುವಂತಾಗುವುದು ಖಂಡಿತ ಎಂಬ ವಿಶ್ವಾಸವನ್ನು ಸಿ. ಪಿ. ಐ. (ಎಂ) ವ್ಯಕ್ತಪಡಿಸುತ್ತದೆ.

●

ಸಂಪಾದಕೀಯ

(ಒಂದನೇ ಪುಟದಿಂದ)

ಪ್ರಚಾರ ಕೊಟ್ಟರು. ಹಿಂದಿ ಪ್ರತಿಪಾದಕರು ಹಿಂದೂಗಳೆಲ್ಲ ತಮ್ಮ ಮಾತೃಭಾಷೆ ಹಿಂದಿ ಎಂದು ದಾಖಲು ಮಾಡಲು ಒತ್ತಾಯಿಸಿದರು. ಈ ಎಲ್ಲ ಹಿನ್ನೆಲೆಯಲ್ಲಿ ಘರ್ಷಣೆ, ಹಿಂಸಾಚಾರದ ವಾತಾವರಣ ಬೆಳೆಯಿತು. ಹಿಂದು ಸಮಾಚಾರ್ ಸಂಪಾದಕರ ಕೊಲೆ ಆಯಿತು. ಇದಕ್ಕೆ ಸಂಬಂಧಿಸಿದಂತೆ ಸಂತ ಭಿಂದರನ್ ವಾಲೆ ಅವರ ಬಂಧನವಾಯಿತು. ಅವರ ಬಿಡುಗಡೆಗೆ ಒತ್ತಾಯಿಸಿ ಭಾರಿ ಪ್ರತಿಭಟನೆ ನಡೆದು. ಗೋಲೀಬಾರಿನಲ್ಲಿ ಹತ್ತಾರು ಮಂದಿ ಅಸು ನೀಗಿದರು. ದರ್ಬಾರ್ ಸಿಂಗ್ ಅವರ ಕಾಂಗ್ರೆಸ್ ಸರಕಾರದ ಬೇಜವಾಬ್ದಾರಿ ವರ್ತನೆ, ಕಾಂಗ್ರೆಸ್ಸು ಛಿದ್ರಕಾರಿ ಶಕ್ತಿಗಳೊಂದಿಗೆ ಶಾಮೀಲಾಗಿದ್ದುದು, ಪರಿಸ್ಥಿತಿಯನ್ನು ಹದಗೆಡಿಸಿದೆ.

ಖಾಲಿಸ್ತಾನ ಬೇಡಿಕೆಯಿಂದ ಸಮಸ್ಯೆಗೆ ಪರಿಹಾರವಿಲ್ಲ ಬದಲು ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ರಾಜ್ಯಗಳ ಸ್ವಾಯತ್ತತೆಗೆ, ದೇಶದ ಎಲ್ಲಾ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಹೋರಾಡಿದರೇನೇ ಸಮಸ್ಯೆಗಳ-ಪರಿಹಾರ ಸಾಧ್ಯ ಎಂಬ ನಿಲುವನ್ನು ಅನುಸರಿಸಿ ಸಿ. ಪಿ. ಐ. (ಎಂ) ಪಂಜಾಬ್ ಘಟಕ ಮತ್ತು ಇತರೆ ಎಡ ಪ್ರಜಾಪ್ರಭುತ್ವ ಶಕ್ತಿಗಳು ಪ್ರಚಾರ, ತಿಳುವಳಿಕೆ ಕೊಡುವ ಕೆಲಸ ಮಾಡುತ್ತಾ ಬಂದಿವೆ. ಅಕಾಲಿದಲ (ಸಂತ)ದ ಮುಖಂಡತ್ವವು ತಮ್ಮಲ್ಲೇ ಇರುವ ಒಂದು ತೀವ್ರಗಾಮಿ ವಿಭಾಗದ ಪ್ರತ್ಯೇಕತಾ ಬೇಡಿಕೆಯನ್ನು ಹಿಂದಕ್ಕೆ ಸರಿಸಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರಬೇಕೆನ್ನುವ ಬೇಡಿಕೆಗೆ ಒತ್ತುಕೊಡುವಂತೆ ಮಾಡುವುದೂ ಸಾಧ್ಯವಾಗಿದೆ. ಇಂದಿನ ಭಾವೋದ್ರೇಕದ ವಾತಾವರಣವನ್ನು ಬದಲಾಯಿಸಲು ಎಲ್ಲ ಎಡ ಪ್ರಜಾಪ್ರಭುತ್ವ ಶಕ್ತಿಗಳೂ ಒಂದಾಗಬೇಕು. ಪ್ರತ್ಯೇಕತಾ ಚಳುವಳಿಯ ಹಿಂದೆ ಇರುವ ಸಾಮ್ರಾಜ್ಯಶಾಹಿಯ ಪಿತೂರಿ ಮತ್ತು ಸ್ಥಾಪಿತಹಿತಾಸಕ್ತಿಗಳ ಮೋಸವನ್ನು ಬಯಲಿಗೆಳೆದು, ಕಾರಿ ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸಿ, ದೇಶದ ಸಮಗ್ರತೆ ಮತ್ತು ದುಡಿಯುವ ಜನಕೋಟಿಯ ಐಕ್ಯತೆಯನ್ನು ಸಾಧಿಸಬೇಕು. ○

ಯುವಜನ ಸಂಘಟನೆಯ ರಾಜ್ಯ ಸಮ್ಮೇಳನ

ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯ ಸಮ್ಮೇಳನವು ಬೆಂಗಳೂರಿನಲ್ಲಿ ಅಕ್ಟೋಬರ್ 24, 25 ಮತ್ತು 26ರಂದು ನಡೆಯಲಿದೆ. ಸಮ್ಮೇಳನವು ಬೆಂಗಳೂರಿನ ಕಾರ್ಪೊರೇಷನ್ನಿನ ಹಿಂಬಾಗದಲ್ಲಿರುವ 'ದೇವಾಂಗ ಸಂಘ'ದಲ್ಲಿ ನಡೆಯಲಿದೆ.

ಇದಕ್ಕೆ ಮೊದಲು ಎಲ್ಲ ಜಿಲ್ಲಾ ಘಟಕಗಳೂ ತಮ್ಮ ಜಿಲ್ಲಾ ಅಥವಾ ತಾಲ್ಲೂಕು ಸಮ್ಮೇಳನಗಳನ್ನು ಮುಗಿಸಬೇಕು. ಈ ಸಮ್ಮೇಳನಗಳನ್ನು ಸದಸ್ಯತ್ವದ ಆಧಾರದ ಮೇಲೆ ನಡೆಸಬೇಕು.

ರಾಜ್ಯ ಮತ್ತು ಜಿಲ್ಲಾ ಸಮ್ಮೇಳನಗಳಿಗೆ ಮೊದಲು ಆಯಾ ಜಿಲ್ಲಾ ಘಟಕಗಳು ತಾನು ತೆಗೆದುಕೊಂಡಿರುವ ಸದಸ್ಯತ್ವದ ಕೋಟಾ ಪೂರೈಸಬೇಕು. ಸದಸ್ಯತ್ವದ ಅರ್ಧದಷ್ಟು ಹಣವನ್ನು ರಾಜ್ಯಸಮಿತಿಗೆ 15-10-81ರ ಒಳಗೆ ರಾಜ್ಯ ಸಂಚಾಲಕರಿಗೆ ಕಳಿಸಬೇಕು.

ರಾಜ್ಯ ಸಮ್ಮೇಳನಕ್ಕೆ 50 ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ರಾಜ್ಯ ಸಮ್ಮೇಳನದ ಪ್ರತಿನಿಧಿ ಶುಲ್ಕ 10ರೂ.ಗಳು. ಪ್ರತಿ ಜಿಲ್ಲೆಗೂ 5ಜನ ವೀಕ್ಷಕರನ್ನು ಕರೆತರುವ ಅವಕಾಶವಿದೆ.

ರಾಯಚೂರು ಸಮ್ಮೇಳನದಿಂದೀಚೆಗೆ ಆಯಾ ಜಿಲ್ಲೆಗಳ ಚಟುವಟಿಕೆಗಳು, ಹೋರಾಟಗಳು, 1981ರ ಸದಸ್ಯತ್ವ, ಸ್ಥಾನಿಕ ಘಟಕಗಳ ಸಂಖ್ಯೆ (ತಾಲ್ಲೂಕು, ಗ್ರಾಮ ಇತ್ಯಾದಿ)ಯನ್ನೊಳಗೊಂಡ ವಿವರವಾದ ವರದಿಯನ್ನು 10-10-81ರ ಒಳಗೆ ಕಳುಹಿಸಿಕೊಡಬೇಕು.

ಸಮ್ಮೇಳನದ ಅಂಗವಾಗಿ ಕರಪತ್ರಗಳನ್ನು ರಾಜ್ಯಸಮಿತಿಯಿಂದ ಕಳುಹಿಸಿ ಕೊಡಲಾಗುವುದು. ಜೊತೆಗೆ ಆಯಾ ಜಿಲ್ಲೆಯವರು ಗೋಡೆ ಬರಹ ಮತ್ತು ಇತರ ಪ್ರಚಾರ ಸಾಧನಗಳ ಮೂಲಕ ರಾಜ್ಯಸಮ್ಮೇಳನದ ಬಗ್ಗೆ ಅತಿ ಹೆಚ್ಚಿನ ಪ್ರಚಾರ ನೀಡಬೇಕು.

ರಾಜ್ಯ ಸಮ್ಮೇಳನಕ್ಕೆ ಬರುವ ಎಲ್ಲಾ ಪ್ರತಿನಿಧಿಗಳು ಮತ್ತು ವೀಕ್ಷಕರು 24-10-81ರಂದು 10 ಘಂಟೆಯೊಳಗೆ ಬೆಂಗಳೂರನ್ನು ತಲುಪಬೇಕು.

ಜಿ. ವಿ. ಶ್ರೀರಾಮರೆಡ್ಡಿ
ಸಂಚಾಲಕ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT